**ಕರ್ನಾಟಕ ಸರ್ಕಾರ**

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,**

**ಕೇಂದ್ರೀಕೃತ ದಾಖಲಾತಿ ಘಟಕ, ಕಾವೇರಿ ಭವನದ ಎದುರು, ಕೆ.ಜಿ.ರಸ್ತೆ, ಬೆಂಗಳೂರು-560 009**

Phone :22228805,22483140,2248 email.cackarnataka@gmail.com

ಸಂ.ಸಿಎಸಿ-05.ಡಿ.ಇಎಲ್.ಇಡಿ/ಡಿ.ಪಿ.ಇಡಿ,ಡಿ.ಪಿ.ಎಸ್.ಇ.ದಾ/02/2022-23 ದಿನಾಂಕ: 05-07-2022

ಪ್ರಕಟಣೆ

ವಿಷಯ: 2022-23ನೇ ಸಾಲಿನ ಡಿ.ಇ.ಎಲ್.ಇಡಿ/ಡಿ.ಪಿ.ಇಡಿ/ಡಿ.ಪಿ.ಎಸ್.ಇ ಕೋರ್ಸುಗಳಿಗೆ ಸರ್ಕಾರಿ ಕೋಟಾದ ಸೀಟುಗಳಿಗೆ ದಾಖಲಾತಿ ಪ್ರಕ್ರಿಯೆ ಕುರಿತು.

2022-23ನೇ ಸಾಲಿಗೆ ಡಿ.ಇ.ಎಲ್.ಇಡಿ/ಡಿ.ಪಿ.ಇಡಿ/ಡಿ.ಪಿ.ಎಸ್.ಇ ಕೋರ್ಸಿನ (ವಿವಿಧ ಮಾಧ್ಯಮಗಳ) ಪ್ರಥಮ ವರ್ಷದ ವ್ಯಾಸಂಗಕ್ಕಾಗಿ ರಾಜ್ಯದಲ್ಲಿನ ಅಂಗೀಕೃತ ಶಿಕ್ಷಕರ ತರಬೇತಿ ಸಂಸ್ಥೆಗಳಲ್ಲಿನ ಸರ್ಕಾರಿ ಕೋಟಾದ ಸೀಟುಗಳನ್ನು ತುಂಬಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಆಸಕ್ತ ಅಭ್ಯರ್ಥಿಗಳು ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ www.schooleducation.kar.nic.in ಅನ್ನು ಸಂಪರ್ಕಿಸಿ, ವೆಬ್‌ಸೈಟ್‌ನಲ್ಲಿ ಕಾಣುವ APPLICATION FOR D.El.Ed /D.P.Ed /D.P.S.E ADMISSIONS FOR GOVERNMENT QUOTA SEATS: **2022-23ರ ಮೂಲಕ ಅರ್ಜಿ ಸಲ್ಲಿಸುವುದು.**

## 2022-23ನೇ ಸಾಲಿನ ಡಿ.ಇಎಲ್.ಇಡಿ/ ಡಿ.ಪಿ.ಇಡಿ/ ಡಿ.ಪಿ.ಎಸ್.ಇ ಕೋರ್ಸುಗಳಿಗೆ ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗಳಿಗೆ ಅರ್ಜಿ ಭರ್ತಿ ಮಾಡುವ ಬಗ್ಗೆ ಮಾರ್ಗಸೂಚಿ:

1. ಅರ್ಜಿ ಭರ್ತಿ ಮಾಡುವ ಮುನ್ನ ಸಾಮಾನ್ಯ ಸೂಚನೆಗಳು, ಮಾರ್ಗಸೂಚಿಯನ್ನು(Broucher) ಓದಿಕೊಂಡು ಮನದಟ್ಟು ಮಾಡಿಕೊಂಡು ಶೈಕ್ಷಣಿಕ ವಿದ್ಯಾರ್ಹತೆ, ವಯೋಮಿತಿ, ಶುಲ್ಕ, ಮೀಸಲಾತಿ ಮತ್ತಿತರ ವಿವರಗಳನ್ನು ಖಚಿತಪಡಿಸಿಕೊಂಡ ನಂತರ ಅರ್ಜಿ ಭರ್ತಿ ಮಾಡುವುದು.
2. ಡಿ.ಇಎಲ್.ಇಡಿ/ ಡಿ.ಪಿ.ಇಡಿ/ ಡಿ.ಪಿ.ಎಸ್.ಇ ಕೋರ್ಸುಗಳಿಗೆ ದಾಖಲಾತಿ ಬಯಸುವ ಅಭ್ಯರ್ಥಿಗಳು ಅರ್ಜಿಗಳನ್ನು www.schooleducation.kar.nic.in ಅಂತರ್ಜಾಲದ Home Page ನಲ್ಲಿ ಪ್ರಕಟವಾಗುವ Application for Admission to ಪ್ರಾಥಮಿಕ ಶಿಕ್ಷಣದಲ್ಲಿ ಡಿಪ್ಲೊಮಾ (Diploma in Primary Education D.El.Ed), ದೈಹಿಕ ಶಿಕ್ಷಣದಲ್ಲಿ ಡಿಪ್ಲೊಮಾ (Diploma in Physical Education D.P.Ed.,) ಹಾಗೂ ಪೂರ್ವ ಪ್ರಾಥಮಿಕ ಶಿಕ್ಷಣದಲ್ಲಿ ಡಿಪ್ಲೊಮಾ (Diploma in Pre-School Education-D.P.S.E) Courses 2022-23 ಎಂಬುದನ್ನು ಕ್ಲಿಕ್ ಮಾಡಿದ ನಂತರ ಪರದೆಯ ಮೇಲೆ ಪ್ರಕಟವಾಗುವ ಅರ್ಜಿಯನ್ನು ಮುದ್ರಣ ಮಾಡಿಕೊಂಡು ಅರ್ಜಿಯನ್ನು ಭರ್ತಿ ಮಾಡಿ ನೋಡಲ್ ಕೇಂದ್ರಗಳಾದ ಸಂಬಂಧಪಟ್ಟ ಡಯಟ್‌ಗಳಲ್ಲಿ(ಲಿಂಕ್ ನೋಡಿ) ಸಲ್ಲಿಸುವುದು.

## SCHEDULE FOR ADMISSION PROCESS FOR DIPLOMA IN ELEMENTARY EDUCATION (D.EL.Ed) /DIPLOMA IN PHYSICAL EDUCATION ( D.P.Ed) & (D.P.S.E) DIPLOMA IN PRE-SCHOOL EDUCATION

## ಪ್ರಾಥಮಿಕ ಶಿಕ್ಷಣದಲ್ಲಿ ಡಿಪ್ಲೊಮಾ (D.EL.Ed) ದೈಹಿಕ ಶಿಕ್ಷಣದಲ್ಲಿ ಡಿಪ್ಲೊಮಾ (D.P.Ed) ಪೂರ್ವ ಪ್ರಾಥಮಿಕ ಶಿಕ್ಷಣದಲ್ಲಿ ಡಿಪ್ಲೊಮಾ (D.P.S.E) ದಾಖಲಾತಿ ಪ್ರಕ್ರಿಯೆಗಳ ವೇಳಾಪಟ್ಟಿ

## 1. ವೇಳಾಪಟ್ಟಿ:-

| | | |
|---|---|---|
| 1 | ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ ದಿನಾಂಕ<br>**Submission of applications** | ದಿ: 05-07-2022 ರಿಂದ 31-07-2022 ರ ಸಂಜೆ 5.30 ಗಂಟೆಯವರೆಗೆ.<br>**From** 05-07-2022 **to** 31-07-2022, **5.30p.m.** |
| 2 | ಅರ್ಜಿ ಶುಲ್ಕವನ್ನು ಬ್ಯಾಂಕ್‌ನಲ್ಲಿ ಡಿ.ಡಿ. ಮೂಲಕ ಪಾವತಿಸುವ ಕೊನೆಯ ದಿನಾಂಕ<br>**Last Date for Remittance of Application fee at Bank through DD.** | 31-07-2022 |
| 3 | ಜಿಲ್ಲೆಯೊಳಗಿನ ಪರಸ್ಪರ ವರ್ಗಾವಣೆ<br>**Mutual Transfer within the District** | ಸಂಬಂಧಪಟ್ಟ ಉಪನಿರ್ದೇಶಕರು (ಅಭಿವೃದ್ಧಿ) ಹಾಗೂ ಡಯಟ್‌ನ ಪ್ರಾಂಶುಪಾಲರು<br>**Principal / Deputy Director (Development) of the concerned D.I.E.T's** |
| 4 | ಅಂತರ್ ಜಿಲ್ಲಾ ಪರಸ್ಪರ ವರ್ಗಾವಣೆ (ಕೇಂದ್ರೀಕೃತ ದಾಖಲಾತಿ ಘಟಕ ಮೂಲಕ)<br>**Inter District Mutual Transfers at C.A.C** | ವ್ಯವಸ್ಥಾಪಕ ಕೇಂದ್ರಗಳಲ್ಲಿ ದಾಖಲಾತಿ ಪ್ರಕ್ರಿಯೆ ಮುಗಿದ ನಂತರ<br>**After the completion of admission Process at the Nodal Centers** |

### ಅರ್ಜಿ ಶುಲ್ಕ :-

| ಕ್ರಮ ಸಂಖ್ಯೆ | ವರ್ಗ | ಅರ್ಜಿ ಶುಲ್ಕ | ಪ್ರಕ್ರಿಯೆ ಶುಲ್ಕ | ಒಟ್ಟು ಶುಲ್ಕ |
|---|---|---|---|---|
| 1 | ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗ, ಪ್ರವರ್ಗ-1 ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ | ರೂ. 00-00 | ರೂ. 50-00 | **ರೂ. 50-00** |
| 2 | ಇತರೆ ಅಭ್ಯರ್ಥಿಗಳು | ರೂ.100-00 | ರೂ. 50-00 | **ರೂ. 150-00** |

**ಸೂಚನೆ:** ಅಭ್ಯರ್ಥಿಗಳು ಅರ್ಜಿ ಶುಲ್ಕವನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (SBI) ಬ್ಯಾಂಕಿನ ಯಾವುದೇ ಶಾಖೆಯಲ್ಲಿ **'SPECIAL OFFICER' CAC, BANGALORE.** ಇವರ ಹೆಸರಿಗೆ ಬ್ಯಾಂಕ್ ಹುಂಡಿ ಪಡೆದು ಆಫ್‌ಲೈನ್ ಅರ್ಜಿಯೊಂದಿಗೆ ಸಂಬಂಧಪಟ್ಟ ಜಿಲ್ಲಾ ವ್ಯವಸ್ಥಾಪಕ ಕೇಂದ್ರದಲ್ಲಿ (ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ) ಸಲ್ಲಿಸುವುದು. ಮೇಲಿನ ಶುಲ್ಕ ವಿವರಗಳು ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ ಮತ್ತು ಅನುದಾನರಹಿತ ಶಿಕ್ಷಣ ಸಂಸ್ಥೆಗಳಲ್ಲಿ ಸರ್ಕಾರಿ ಕೋಟಾದಡಿ ಡಿ.ಇಎಲ್.ಇಡಿ/ಡಿ.ಪಿ.ಇಡಿ/ಡಿ.ಪಿ.ಎಸ್.ಇ ಕೋರ್ಸುಗಳಿಗೆ ದಾಖಲಾಗುವ ಪ್ರಶಿಕ್ಷಣಾರ್ಥಿಗಳಿಗೆ ಮಾತ್ರ ಅನ್ವಯಿಸುತ್ತದೆ.

ಅರ್ಜಿಗಳನ್ನು ಭರ್ತಿ ಮಾಡುವಾಗ ಅಪೂರ್ಣ ಮಾಹಿತಿ, ತಪ್ಪು ಮಾಹಿತಿಗಳನ್ನು ನೀಡುವುದರಿಂದ ಉಂಟಾಗುವ ವ್ಯತಿರಿಕ್ತ ಪರಿಣಾಮಕ್ಕೆ ಅಭ್ಯರ್ಥಿಗಳೇ ಜವಾಬ್ದಾರರಾಗಿರುತ್ತಾರೆ. ಇಂತಹ ಅಭ್ಯರ್ಥಿಗಳ ಅರ್ಜಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.

### II. ಡಿ.ಇಎಲ್.ಇಡಿ ಮತ್ತು ಡಿ.ಪಿ.ಎಸ್.ಇ ಕೋರ್ಸಿಗೆ ಅರ್ಹತೆಗಳು :-

1. ಸರ್ಕಾರಿ ಕೋಟಾದ ಸೀಟುಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಯು ಭಾರತದ ಪ್ರಜೆಯಾಗಿದ್ದು, ಕರ್ನಾಟಕದ ಅಭ್ಯರ್ಥಿಯಾಗಿರಬೇಕು.

2. **"<u>ಕರ್ನಾಟಕದ ಅಭ್ಯರ್ಥಿ ಎಂದರೆ</u>"**

ಸರ್ಕಾರಿ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳಲ್ಲಿ 1 ನೇ ತರಗತಿಯಿಂದ ದ್ವಿತೀಯ ಪಿ.ಯು.ಸಿ. ಅಥವಾ 12 ನೇ ತರಗತಿ ಅಥವಾ ಅರ್ಹತಾ ಪರೀಕ್ಷೆಯವರೆಗೆ ಕನಿಷ್ಟ 7 ವರ್ಷಗಳ ವ್ಯಾಸಂಗವನ್ನು ಕರ್ನಾಟಕದಲ್ಲಿ ಮಾಡಿರಬೇಕು.

**ಹಾಗೂ**

3. ಎಸ್.ಎಸ್.ಎಲ್.ಸಿ./10ನೇ ತರಗತಿ ಅಥವಾ ದ್ವಿತೀಯ ಪಿ.ಯು.ಸಿ./12ನೇ ತರಗತಿ ಪರೀಕ್ಷೆಯಲ್ಲಿ ಕರ್ನಾಟಕದಲ್ಲಿಯೇ ಉತ್ತೀರ್ಣರಾಗಿರಬೇಕು.

4. ಎಸ್.ಎಸ್.ಎಲ್.ಸಿ. ಅಥವಾ ಪಿ.ಯು.ಸಿ. ಪರೀಕ್ಷೆಗಳಿಗೆ ನೇರವಾಗಿ ನೋಂದಣಿ ಮಾಡಿ ಉತ್ತೀರ್ಣರಾದ ವಿದ್ಯಾರ್ಥಿಗಳು ಹಾಗೂ ರಾಷ್ಟ್ರೀಯ ಮುಕ್ತ ಶಾಲೆಯಲ್ಲಿ ಅಧ್ಯಯನ ಮಾಡಿ ಉತ್ತೀರ್ಣರಾದ ವಿದ್ಯಾರ್ಥಿಗಳು 7 ವರ್ಷಗಳ ವ್ಯಾಸಂಗ ಪ್ರಮಾಣ ಪತ್ರವನ್ನು ಸಲ್ಲಿಸಬೇಕಾದ ಅಗತ್ಯವಿಲ್ಲ. **ಆದರೆ ಈ ಅಭ್ಯರ್ಥಿಗಳು ಕರ್ನಾಟಕದಲ್ಲಿ ಕನಿಷ್ಟ 7 ವರ್ಷಗಳು ವಾಸಿಸಿರುವ ಬಗ್ಗೆ ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರ್‌ರವರಿಂದ ಪಡೆದ ವಾಸಸ್ಥಳದ ಪ್ರಮಾಣ ಪತ್ರವನ್ನು ದಾಖಲಾತಿಯ ಸಮಯದಲ್ಲಿ ಜಿಲ್ಲಾ ವ್ಯವಸ್ಥಾಪಕ ಕೇಂದ್ರ (DIET) ದಲ್ಲಿ ಸಲ್ಲಿಸಬೇಕು.**

5. ಎಸ್.ಎಸ್.ಎಲ್.ಸಿ. ಅಥವಾ ಪಿ.ಯು.ಸಿ. ಪರೀಕ್ಷೆಗಳಿಗೆ ನೇರವಾಗಿ ನೋಂದಣಿ ಮಾಡಿ ಉತ್ತೀರ್ಣರಾದ ವಿದ್ಯಾರ್ಥಿಗಳು ಹಾಗೂ ರಾಷ್ಟ್ರೀಯ ಮುಕ್ತ ಶಾಲೆಯಲ್ಲಿ ಅಧ್ಯಯನ ಮಾಡಿ ಉತ್ತೀರ್ಣರಾದ ಅಭ್ಯರ್ಥಿಗಳು, ಕರ್ನಾಟಕ ರಾಜ್ಯ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ / ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯದಿಂದ **"**ಖಾಸಗಿ ಅಭ್ಯರ್ಥಿ**"** ಎಂದು ನಮೂದಿಸಿರುವ ಅಂಕಪಟ್ಟಿಯನ್ನಾಗಲಿ ಅಥವಾ ದೃಢೀಕರಣ ಪತ್ರವನ್ನಾಗಲೀ ದಾಖಲಾತಿಯ ಸಮಯದಲ್ಲಿ ವ್ಯವಸ್ಥಾಪಕ ಕೇಂದ್ರ (DIET) ದಲ್ಲಿ ಸಲ್ಲಿಸಬೇಕು.
**(ಅಭ್ಯರ್ಥಿಯು ಒಂದು ತರಗತಿ ಅಥವಾ ವರ್ಗದಲ್ಲಿ ಉತ್ತೀರ್ಣರಾಗಲು ಒಂದಕ್ಕಿಂತ ಹೆಚ್ಚು ವರ್ಷಗಳನ್ನು ತೆಗೆದುಕೊಂಡಿದ್ದಲ್ಲಿ ಅಂತಹ ಶೈಕ್ಷಣಿಕ ವರ್ಷಗಳ ವ್ಯಾಸಂಗವನ್ನು ಒಂದು ವರ್ಷ ಎಂದು ಗಣನೆಗೆ ತೆಗೆದುಕೊಳ್ಳಲಾಗುವುದು).**

6. ಕೇಂದ್ರ ಸರ್ಕಾರ ಅಥವಾ ಕೇಂದ್ರಾಡಳಿತಕ್ಕೊಳಪಟ್ಟ ಅಥವಾ ಕರ್ನಾಟಕ ಸರ್ಕಾರದ ಅಧೀನಕ್ಕೊಳಪಟ್ಟ ಅಥವಾ ಜಾಯಿಂಟ್ ಸೆಕ್ಟರ್ ಅಂಡರ್‌ಟೇಕಿಂಗ್‌ನಲ್ಲಿ ಕರ್ತವ್ಯ ನಿರ್ವಹಿಸುತಿದ್ದು, ಅಂತಹ ಅಭ್ಯರ್ಥಿಯು ಅವರ ಉದ್ಯೋಗದಲ್ಲಿರುವ ಷರತ್ತುಗಳನ್ವಯ ಭಾರತದ ಯಾವುದೇ ಭಾಗಕ್ಕೆ ವರ್ಗಾಯಿಸಲ್ಪಡುತ್ತಿರುವ ಹಾಗೂ ದಾಖಲಾತಿ ಬಯಸುವ ವರ್ಷದ ಜುಲೈ–1ಕ್ಕೆ ಸರಿಯಾಗಿ ಕರ್ನಾಟಕದಲ್ಲಿ ಸತತವಾಗಿ ಒಂದು ವರ್ಷ ಸೇವೆ ಸಲ್ಲಿಸಿರುವ ಉದ್ಯೋಗಿಗಳ ಮಗ ಅಥವಾ ಮಗಳು ಅರ್ಹರಾಗಿರುತ್ತಾರೆ. ಈ ಅಭ್ಯರ್ಥಿಗಳು ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದಿರುವ ಶಿಕ್ಷಣ ಸಂಸ್ಥೆಯಿಂದ ಕೋರ್ಸಿಗೆ ನಿಗದಿಪಡಿಸಿರುವ ಅರ್ಹತಾ ಪರೀಕ್ಷೆಯನ್ನು ಪಾಸು ಮಾಡಿರಬೇಕು.

7. ಕೇಂದ್ರ ಸರ್ಕಾರ ಅಥವಾ ಕೇಂದ್ರಾಡಳಿತಕ್ಕೊಳಪಟ್ಟ ಅಥವಾ ಕರ್ನಾಟಕ ಸರ್ಕಾರದ ಅಧೀನಕ್ಕೊಳಪಟ್ಟ ಅಥವಾ ಜಾಯಿಂಟ್ ಸೆಕ್ಟರ್ ಅಂಡರ್‌ಟೇಕಿಂಗ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಥವಾ ನಿವೃತ್ತಿ ಹೊಂದಿರುವ ಉದ್ಯೋಗಿಗಳ ಮಗ ಅಥವಾ ಮಗಳು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅರ್ಹತೆ ಪಡೆದಿರುತ್ತಾರೆ.

**(i)** ನೌಕರಿಗೆ ಸೇರುವಾಗ ತಮ್ಮ ಉದ್ಯೋಗದಾತರಿಗೆ ಘೋಷಣೆ ಮಾಡಿಕೊಂಡಿರುವ ಮೂಲಸ್ಥಾನ ಕರ್ನಾಟಕವಾಗಿರಬೇಕು.

**(ii)** ಅಭ್ಯರ್ಥಿಯು ಸರ್ಕಾರ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದಿರುವ ಶಿಕ್ಷಣ ಸಂಸ್ಥೆಗಳಲ್ಲಿ ಒಂದನೇ ತರಗತಿಯಿಂದ 12ನೇ ತರಗತಿ ಅಥವಾ ದ್ವಿತೀಯ ಪಿ.ಯು.ಸಿ.ಯವರೆಗೆ ಕನಿಷ್ಠ 7 ವರ್ಷಗಳು ಕರ್ನಾಟಕದಲ್ಲಿಯೇ ಅಭ್ಯಸಿಸಿ ಉತ್ತೀರ್ಣರಾಗಿರಬೇಕು.

**(iii)** ಉದ್ಯೋಗಿಯು ಭಾರತದ ಯಾವುದೇ ಭಾಗಕ್ಕೆ ತನ್ನ ಉದ್ಯೋಗದ ಷರತ್ತುಗಳನ್ವಯ ವರ್ಗಾಯಿಸಲ್ಪಡುವವರಾಗಿರಬೇಕು.

8. ಕರ್ನಾಟಕದಿಂದ ಲೋಕಸಭೆಗೆ ಆಯ್ಕೆಯಾಗಿರುವ ಹಾಲಿ ಲೋಕಸಭಾ ಸದಸ್ಯರ ಮಗ ಅಥವಾ ಮಗಳು.

9. ಕರ್ನಾಟಕ ವ್ಯಾಪ್ತಿಗೆ ನಿಗದಿಪಡಿಸಿದ ಭಾರತೀಯ ಆಡಳಿತ ಸೇವೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಅಥವಾ ನಿವೃತ್ತಿ ಹೊಂದಿದ ಉದ್ಯೋಗಿಗಳ ಮಗ ಅಥವಾ ಮಗಳು. ಇಂತಹ ಉದ್ಯೋಗಿಗಳ ಮಗ ಅಥವಾ ಮಗಳು 1 ರಿಂದ 12ನೇ ತರಗತಿ ಅಥವಾ ದ್ವಿತೀಯ ಪಿ.ಯು.ಸಿ.ಯನ್ನು ರಾಜ್ಯದ ಹೊರಗಡೆ ಅಭ್ಯಾಸ ಮಾಡಿದ್ದು ಹಾಗೂ ಉದ್ಯೋಗಿಗಳು ಅದೇ ಸಮಯದಲ್ಲಿ ರಾಜ್ಯದ ಹೊರಗಡೆ ಕೆಲಸ ಮಾಡಿದ್ದು ಅಥವಾ ಮಾಡುತ್ತಿದ್ದು ಇಂತಹ ಉದ್ಯೋಗಿಗಳ ಮಗ ಅಥವಾ ಮಗಳು 7 ವರ್ಷಗಳು ಕರ್ನಾಟಕದಲ್ಲಿ ವ್ಯಾಸಂಗ ಮಾಡಿರುವವರೆಂದು ಪರಿಗಣಿಸಲಾಗುವುದು.

ಕ್ರಮಸಂಖ್ಯೆ: (5), (6), (7) ಮತ್ತು (8) ಈ ಗುಂಪುಗಳ ಅಭ್ಯರ್ಥಿಗಳನ್ನು **"**ಕರ್ನಾಟಕದ ಅಭ್ಯರ್ಥಿ**"** ಎಂದು ಪರಿಗಣಿಸಲಾಗುವುದು. ಈ ಅಭ್ಯರ್ಥಿಗಳು ಸಂಬಂಧಪಟ್ಟ ಅಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರಗಳನ್ನು ದಾಖಲಾತಿಯ ಸಮಯದಲ್ಲಿ ವ್ಯವಸ್ಥಾಪಕ ಕೇಂದ್ರ (DIET) ದಲ್ಲಿ ಸಲ್ಲಿಸಬೇಕು.

**ಸೂಚನೆ:–** ನಿಯಮಗಳಂತೆ ಮಗ / ಮಗಳು ಅಂದರೆ ಸ್ವಾಭಾವಿಕವಾಗಿ ಜನಿಸಿರುವ ಮಗ / ಮಗಳು ಅಲ್ಲದೇ ಕಾನೂನಿನಂತೆ ದತ್ತು ಪಡೆದಿರುವ ಮಗ / ಮಗಳು ಅರ್ಹರಿರುತ್ತಾರೆ. ಆದರೆ ಕಾನೂನು ಬದ್ಧವಾಗಿ ದತ್ತಕ ಪಡೆದಿರುವ ಬಗ್ಗೆ ದಾಖಲೆ / ವ್ಯಾಸಂಗ ಮಾಡಿರುವ ಬಗೆಗಿನ ದಾಖಲೆಗಳಲ್ಲೂ ನಮೂದಿತವಾಗಿರಬೇಕು. ದಾಖಲೆಯನ್ನು ದಾಖಲಾತಿಯ ಸಮಯದಲ್ಲಿ ಜಿಲ್ಲಾ ವ್ಯವಸ್ಥಾಪಕ ಕೇಂದ್ರ (DIET) ದಲ್ಲಿ **ಸಲ್ಲಿಸಬೇಕು.**

**III. ವಿದ್ಯಾರ್ಹತೆ :–**

(i) ಅಭ್ಯರ್ಥಿಯು ದ್ವಿತೀಯ ಪಿ.ಯು.ಸಿ/12ನೇ ತರಗತಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಈ ಕೆಳಕಂಡ ವಿಷಯಗಳನ್ನು ಕಡ್ಡಾಯವಾಗಿ ವ್ಯಾಸಂಗ ಮಾಡಿ ಉತ್ತೀರ್ಣರಾಗಿರಬೇಕು.

(ii) ಭಾಷಾ ವಿಷಯಗಳು:– ಇಂಗ್ಲೀಷ್, ಕನ್ನಡ, ಹಿಂದಿ, ತೆಲುಗು, ಅರೇಬಿಕ್, ತಮಿಳು, ಮಲಯಾಳಂ, ಉರ್ದು ಮರಾಠಿ, ಸಂಸ್ಕೃತ, ಇವುಗಳ ಪೈಕಿ ಕನಿಷ್ಟ ಎರಡು ಭಾಷಾ ವಿಷಯಗಳಲ್ಲಿ ವ್ಯಾಸಂಗ ಮಾಡಿರಬೇಕು.

(iii) ಕಲಾ, ವಿಜ್ಞಾನ ಮತ್ತು ವಾಣಿಜ್ಯ ವಿಭಾಗದ ಅಭ್ಯರ್ಥಿಗಳು ಈ ಕೆಳಗೆ ಪಟ್ಟಿಮಾಡಿರುವ ಐಚ್ಛಿಕ ವಿಷಯಗಳ ಪೈಕಿ ಕನಿಷ್ಟ ಎರಡು ಐಚ್ಛಿಕ ವಿಷಯಗಳನ್ನು ದ್ವಿತೀಯ ಪಿ.ಯು.ಸಿ. / 12ನೇ ತರಗತಿ / ತತ್ಸಮಾನ ಪರೀಕ್ಷೆಯಲ್ಲಿ ಅಧ್ಯಯನ ಮಾಡಿರಲೇಬೇಕು.

**ಕಲಾ ವಿಭಾಗ:** ಇತಿಹಾಸ, ಪೌರನೀತಿ, ಅರ್ಥಶಾಸ್ತ್ರ, ಭೂಗೋಳ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಐಚ್ಛಿಕ ಕನ್ನಡ, ಶಿಕ್ಷಣ–1, ಶಿಕ್ಷಣ–2.

**ವಿಜ್ಞಾನ ವಿಭಾಗ:** ಭೌತಶಾಸ್ತ್ರ, ರಸಾಯನ ಶಾಸ್ತ್ರ, ಜೀವಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಗಣಿತ ಮತ್ತು ಸಂಖ್ಯಾಶಾಸ್ತ್ರ.

**ವಾಣಿಜ್ಯ ವಿಭಾಗ:** ಇತಿಹಾಸ, ಅರ್ಥಶಾಸ್ತ್ರ, ಭೂಗೋಳ, ರಾಜ್ಯಶಾಸ್ತ್ರ, ಸಮಾಜ ಶಾಸ್ತ್ರ, ಐಚ್ಛಿಕ ಕನ್ನಡ, ಶಿಕ್ಷಣ–1, ಶಿಕ್ಷಣ–2, ಸಂಖ್ಯಾಶಾಸ್ತ್ರ,

ಅಭ್ಯರ್ಥಿಯು ಯಾವ ಮಾಧ್ಯಮಕ್ಕೆ ಅರ್ಜಿ ಸಲ್ಲಿಸಿರುವರೋ ಆ ಮಾಧ್ಯಮದಲ್ಲಿ ಎಸ್.ಎಸ್.ಎಲ್.ಸಿ / 10ನೇ ತರಗತಿಯನ್ನು ಅಭ್ಯಾಸ ಮಾಡಿ ಉತ್ತೀರ್ಣರಾಗಿರಬೇಕು ಅಥವಾ ಎಸ್.ಎಸ್.ಎಲ್.ಸಿ / 10ನೇ ತರಗತಿಯಲ್ಲಿ ಆ ಮಾಧ್ಯಮದ ಭಾಷೆಯನ್ನು ಪ್ರಥಮ/ದ್ವಿತೀಯ ಭಾಷೆಯಾಗಿ ವ್ಯಾಸಂಗ ಮಾಡಿರಬೇಕು. ಅಭ್ಯರ್ಥಿಗಳು ಈ ಕೆಳಕಂಡ ಭಾಷಾ ವಿಷಯಗಳಲ್ಲಿ ಯಾವುದಾದರೂ ಎರಡು ಭಾಷೆಗಳನ್ನು ಕಡ್ಡಾಯವಾಗಿ ವ್ಯಾಸಂಗ ಮಾಡಿರಬೇಕು.

**ಭಾಷಾ ವಿಷಯಗಳು:–**ಇಂಗ್ಲೀಷ್, ಕನ್ನಡ, ಹಿಂದಿ, ತೆಲುಗು, ಅರೇಬಿಕ್, ತಮಿಳು, ಮಲಯಾಳಂ, ಉರ್ದು, ಮರಾಠಿ, ಸಂಸ್ಕೃತ

1. ಎಲ್ಲಾ ಅಭ್ಯರ್ಥಿಗಳು ದ್ವಿತೀಯ ಪಿ.ಯು.ಸಿ/12ನೇ ತರಗತಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಒಟ್ಟು ಅಂಕಗಳ ಕನಿಷ್ಟ ಶೇಕಡ 50 ಅಂಕಗಳನ್ನು ಪಡೆದಿರಬೇಕು. ಆದರೆ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಪ್ರವರ್ಗ–1 ಮತ್ತು ವಿಶೇಷಚೇತನ ಅಭ್ಯರ್ಥಿಗಳು ದ್ವಿತೀಯ ಪಿ.ಯು.ಸಿ / 12ನೇ ತರಗತಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಒಟ್ಟು ಅಂಕಗಳ ಕನಿಷ್ಟ ಶೇಕಡ 45 ಅಂಕಗಳನ್ನು ಪಡೆದಿರಬೇಕು.

2. ಇದರೊಂದಿಗೆ ಹೊರನಾಡು ಮತ್ತು ಗಡಿನಾಡು ಮೀಸಲಾತಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಕೇಂದ್ರೀಕೃತ ದಾಖಲಾತಿ ಘಟಕ, ಬೆಂಗಳೂರು ಇಲ್ಲಿ ನಡೆಸಲಾಗುವ ಕನ್ನಡ ಪರೀಕ್ಷೆಗೆ ಕಡ್ಡಾಯವಾಗಿ ಹಾಜರಾಗಬೇಕು.

3. ದ್ವಿತೀಯ ಪಿ.ಯು.ಸಿ/12ನೇ ತರಗತಿ ಪೂರಕ ಪರೀಕ್ಷೆಗೆ ಹಾಜರಾಗಿ ಫಲಿತಾಂಶ ನಿರೀಕ್ಷೆಯಲ್ಲಿರುವ ಅಭ್ಯರ್ಥಿಗಳೂ ಸಹ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ. ಫಲಿತಾಂಶ ಬಂದ ನಂತರ ಆಕ್ಷೇಪಣೆ ಸಲ್ಲಿಸಲು ನಿಗದಿಪಡಿಸಿದ ದಿನಾಂಕದೊಳಗೆ ಆಕ್ಷೇಪಣಾ ನಮೂನೆಯೊಂದಿಗೆ ದೃಢೀಕೃತ ಅಂಕಪಟ್ಟಿಯನ್ನು ಸಂಬಂಧಿಸಿದ ವ್ಯವಸ್ಥಾಪಕ ಕೇಂದ್ರಕ್ಕೆ ಸಲ್ಲಿಸುವುದು.

   ಮೇಲಿನ ಕ್ರಮ ಸಂಖ್ಯೆ 1 ರಿಂದ 3 ರವರೆಗಿನ ಇತರ ಎಲ್ಲಾ ಅರ್ಹತೆಗಳನ್ನು ಪೂರೈಸಿದಲ್ಲಿ ನಿಯಮಾನುಸಾರ ದಾಖಲಾತಿಗೆ ಪರಿಗಣಿಸಲಾಗುವುದು.

## IV. ಡಿ.ಪಿ.ಇಡಿ ಕೋರ್ಸಿಗೆ ಅರ್ಹತೆಗಳು:–

1. ಸರ್ಕಾರಿ ಸೀಟುಗಳಿಗೆ ಅಭ್ಯರ್ಥಿಯು ಭಾರತದ ಪ್ರಜೆಯಾಗಿದ್ದು, ಕರ್ನಾಟಕದ ಅಭ್ಯರ್ಥಿಯಾಗಿರಬೇಕು.
2. **"ಕರ್ನಾಟಕದ ಅಭ್ಯರ್ಥಿ ಎಂದರೆ"**

   ಸರ್ಕಾರಿ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳಲ್ಲಿ 1 ನೇ ತರಗತಿಯಿಂದ ದ್ವಿತೀಯ ಪಿ.ಯು.ಸಿ. ಅಥವಾ 12 ನೇ ತರಗತಿ ಅಥವಾ ಅರ್ಹತಾ ಪರೀಕ್ಷೆಯವರೆಗೆ ಕನಿಷ್ಟ 7 ವರ್ಷಗಳ ವ್ಯಾಸಂಗವನ್ನು ಕರ್ನಾಟಕದಲ್ಲಿ ಮಾಡಿರಬೇಕು.

**ಹಾಗೂ**

3. ಎಸ್.ಎಸ್.ಎಲ್.ಸಿ./ 10 ನೇ ತರಗತಿ ಅಥವಾ ದ್ವಿತೀಯ ಪಿ.ಯು.ಸಿ. / 12 ನೇ ತರಗತಿ ಪರೀಕ್ಷೆಯನ್ನು ಕರ್ನಾಟಕದಲ್ಲಿಯೇ ಉತ್ತೀರ್ಣರಾಗಿರಬೇಕು.

4. ಎಸ್.ಎಸ್.ಎಲ್.ಸಿ. ಅಥವಾ ಪಿ.ಯು.ಸಿ. ಪರೀಕ್ಷೆಗಳಿಗೆ ನೇರವಾಗಿ ನೋಂದಣಿ ಮಾಡಿ ಉತ್ತೀರ್ಣರಾದ ವಿದ್ಯಾರ್ಥಿಗಳು ಹಾಗೂ ರಾಷ್ಟ್ರೀಯ ಮುಕ್ತ ಶಾಲೆಯಲ್ಲಿ ಅಧ್ಯಯನ ಮಾಡಿ ಉತ್ತೀರ್ಣರಾದ ವಿದ್ಯಾರ್ಥಿಗಳು 7 ವರ್ಷಗಳ ವ್ಯಾಸಂಗ ಪ್ರಮಾಣ ಪತ್ರವನ್ನು ಸಲ್ಲಿಸಬೇಕಾದ ಅಗತ್ಯವಿಲ್ಲ. ಆದರೆ ಈ ಅಭ್ಯರ್ಥಿಗಳು **ಕರ್ನಾಟಕದಲ್ಲಿ ಕನಿಷ್ಟ 7 ವರ್ಷಗಳು ವಾಸಿಸಿದ ಬಗ್ಗೆ ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರ್‌ರವರಿಂದ ಪಡೆದ ವಾಸಸ್ಥಳದ ಪ್ರಮಾಣ ಪತ್ರವನ್ನು ದಾಖಲಾತಿಯ ಸಮಯದಲ್ಲಿ** ಜಿಲ್ಲಾ **ವ್ಯವಸ್ಥಾಪಕ ಕೇಂದ್ರದಲ್ಲಿ ಸಲ್ಲಿಸಬೇಕು.**

5. ಎಸ್.ಎಸ್.ಎಲ್.ಸಿ. ಅಥವಾ ಪಿ.ಯು.ಸಿ. ಪರೀಕ್ಷೆಗಳಿಗೆ ನೇರವಾಗಿ ನೋಂದಣಿ ಮಾಡಿ ಉತ್ತೀರ್ಣರಾದ ವಿದ್ಯಾರ್ಥಿಗಳು ಹಾಗೂ ರಾಷ್ಟ್ರೀಯ ಮುಕ್ತ ಶಾಲೆಯಲ್ಲಿ ಅಧ್ಯಯನ ಮಾಡಿ ಉತ್ತೀರ್ಣರಾದ ಅಭ್ಯರ್ಥಿಗಳು, ಕರ್ನಾಟಕ ರಾಜ್ಯ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ / ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯದಿಂದ "ಖಾಸಗಿ ಅಭ್ಯರ್ಥಿ" ಎಂದು ನಮೂದಿಸಿರುವ ಅಂಕಪಟ್ಟಿಯನ್ನಾಗಲಿ ಅಥವಾ ದೃಢೀಕರಣ ಪತ್ರವನ್ನಾಗಲೀ ದಾಖಲಾತಿಯ ಸಮಯದಲ್ಲಿ ಜಿಲ್ಲಾ ವ್ಯವಸ್ಥಾಪಕ ಕೇಂದ್ರದಲ್ಲಿ ಸಲ್ಲಿಸಬೇಕು.

   **(ಅಭ್ಯರ್ಥಿಯು ಒಂದು ತರಗತಿ ಅಥವಾ ವರ್ಗದಲ್ಲಿ ಉತ್ತೀರ್ಣರಾಗಲು ಒಂದಕ್ಕಿಂತ ಹೆಚ್ಚು ವರ್ಷಗಳನ್ನು ತೆಗೆದುಕೊಂಡಿದ್ದಲ್ಲಿ ಅಂತಹ ಶೈಕ್ಷಣಿಕ ವರ್ಷಗಳ ವ್ಯಾಸಂಗವನ್ನು ಒಂದು ವರ್ಷ ಎಂದು ಗಣನೆಗೆ ತೆಗೆದುಕೊಳ್ಳಲಾಗುವುದು).**

6. ಕೇಂದ್ರ ಸರ್ಕಾರ ಅಥವಾ ಕೇಂದ್ರಾಡಳಿತಕ್ಕೊಳಪಟ್ಟ ಅಥವಾ ಕರ್ನಾಟಕ ಸರ್ಕಾರದ ಅಧೀನಕ್ಕೊಳಪಟ್ಟ ಅಥವಾ ಜಾಯಿಂಟ್ ಸೆಕ್ಟರ್ ಅಂಡರ್‌ಟೇಕಿಂಗ್‌ನಲ್ಲಿ ಕೆಲಸ ಮಾಡುತ್ತಿದ್ದು ಅಂತಹ ವ್ಯಕ್ತಿಯು, ಅವರ

ಉದ್ಯೋಗದಲ್ಲಿರುವ ಷರತ್ತುಗಳನ್ವಯ ಭಾರತದ ಯಾವುದೇ ಭಾಗಕ್ಕೆ ವರ್ಗಾಯಿಸಲ್ಪಡುತ್ತಿರುವ ಹಾಗೂ ದಾಖಲಾತಿ ಬಯಸುವ ವರ್ಷದ ಜುಲೈ–1ಕ್ಕೆ ಸರಿಯಾಗಿ ಕರ್ನಾಟಕದಲ್ಲಿ ಸತತವಾಗಿ ಒಂದು ವರ್ಷ ಸೇವೆ ಸಲ್ಲಿಸಿರುವ ಉದ್ಯೋಗಿಗಳ ಮಗ ಅಥವಾ ಮಗಳು ಅರ್ಹರಾಗಿರುತ್ತಾರೆ. ಈ ಅಭ್ಯರ್ಥಿಗಳು ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದಿರುವ ಶಿಕ್ಷಣ ಸಂಸ್ಥೆಯಿಂದ ಕೋರ್ಸಿಗೆ ನಿಗದಿ ಪಡಿಸಿರುವ ಅರ್ಹತಾ ಪರೀಕ್ಷೆಯನ್ನು ಪಾಸು ಮಾಡಿರಬೇಕು.

7. ಕೇಂದ್ರ ಸರ್ಕಾರ ಅಥವಾ ಕೇಂದ್ರಾಡಳಿತಕ್ಕೊಳಪಟ್ಟ ಅಥವಾ ಕರ್ನಾಟಕ ಸರ್ಕಾರದ ಅಧೀನಕ್ಕೊಳಪಟ್ಟ ಅಥವಾ ಜಾಯಿಂಟ್ ಸೆಕ್ಟರ್ ಅಂಡರ್ ಟೇಕಿಂಗ್‌ನಲ್ಲಿ ಕೆಲಸ ಮಾಡುತ್ತಿರುವ ಅಥವಾ ನಿವೃತ್ತಿ ಹೊಂದಿರುವ ಉದ್ಯೋಗಿಗಳ ಮಗ ಅಥವಾ ಮಗಳು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅರ್ಹತೆ ಪಡೆದಿರುತ್ತಾರೆ.

**(i)** ನೌಕರಿಗೆ ಸೇರುವಾಗ ತಮ್ಮ ಉದ್ಯೋಗದಾತರಿಗೆ ಘೋಷಣೆ ಮಾಡಿಕೊಂಡಿರುವ ಮೂಲಸ್ಥಾನ ಕರ್ನಾಟಕವಾಗಿರಬೇಕು.

**(ii)** ಅಭ್ಯರ್ಥಿಯು ಸರ್ಕಾರ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದಿರುವ ಶಿಕ್ಷಣ ಸಂಸ್ಥೆಗಳಲ್ಲಿ ಒಂದನೇ ತರಗತಿಯಿಂದ 12ನೇ ತರಗತಿ ಅಥವಾ ದ್ವಿತೀಯ ಪಿ.ಯು.ಸಿ. ವರೆಗೆ ಕನಿಷ್ಠ 7 ವರ್ಷಗಳು ಕರ್ನಾಟಕದಲ್ಲಿಯೇ ಅಭ್ಯಸಿಸಿ ಉತ್ತೀರ್ಣರಾಗಿರಬೇಕು.

**(iii)** ಉದ್ಯೋಗಿಯು ಭಾರತದ ಯಾವುದೇ ಭಾಗಕ್ಕೆ ತನ್ನ ಉದ್ಯೋಗದ ಷರತ್ತುಗಳನ್ವಯ ವರ್ಗಾಯಿಸಲ್ಪಡುವವರಾಗಿರಬೇಕು.

7. ಕರ್ನಾಟಕದಿಂದ ಲೋಕಸಭೆಗೆ ಆಯ್ಕೆಯಾಗಿರುವ ಹಾಲಿ ಲೋಕಸಭಾಸದಸ್ಯರ ಮಗ ಅಥವಾ ಮಗಳು.

8. ಕರ್ನಾಟಕ ವ್ಯಾಪ್ತಿಗೆ ನಿಗದಿಪಡಿಸಿದ ಭಾರತೀಯ ಆಡಳಿತ ಸೇವೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಅಥವಾ ನಿವೃತ್ತಿ ಹೊಂದಿದ ಉದ್ಯೋಗಿಗಳ ಮಗ ಅಥವಾ ಮಗಳು.

ಇಂತಹ ಉದ್ಯೋಗಿಗಳ ಮಗ ಅಥವಾ ಮಗಳು 1ರಿಂದ 12ನೇ ತರಗತಿ ಅಥವಾ ದ್ವಿತೀಯ ಪಿ.ಯು.ಸಿ.ಯನ್ನು ರಾಜ್ಯದ ಹೊರಗಡೆ ಅಭ್ಯಾಸ ಮಾಡಿದ್ದು ಹಾಗೂ ಉದ್ಯೋಗಿಗಳು ಅದೇ ಸಮಯದಲ್ಲಿ ರಾಜ್ಯದ ಹೊರಗಡೆ ಕೆಲಸ ಮಾಡಿದ್ದು ಅಥವಾ ಮಾಡುತ್ತಿದ್ದು ಇಂತಹ ಉದ್ಯೋಗಿಗಳ ಮಗ ಅಥವಾ ಮಗಳು **7** ವರ್ಷಗಳು ಕರ್ನಾಟಕದಲ್ಲಿ ವ್ಯಾಸಂಗ ಮಾಡಿರುವರೆಂದು ಪರಿಗಣಿಸಲಾಗುವುದು.

(5), (6), (7) ಮತ್ತು (8) ಈ ಗುಂಪುಗಳ ಅಭ್ಯರ್ಥಿಗಳನ್ನು "ಕರ್ನಾಟಕದ ಅಭ್ಯರ್ಥಿ" ಎಂದು ಪರಿಗಣಿಸಲಾಗುವುದು. ಈ ಅಭ್ಯರ್ಥಿಗಳು ಸಂಬಂಧಪಟ್ಟ ಅಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರಗಳನ್ನು ದಾಖಲಾತಿಯ ಸಮಯದಲ್ಲಿ ವ್ಯವಸ್ಥಾಪಕ ಕೇಂದ್ರದಲ್ಲಿ ಸಲ್ಲಿಸಬೇಕು.

**ಸೂಚನೆ:–**

1) ನಿಯಮಗಳಂತೆ ಮಗ /ಮಗಳು ಅಂದರೆ ಸ್ವಾಭಾವಿಕವಾಗಿ ಜನಿಸಿರುವ ಮಗ /ಮಗಳು ಅಲ್ಲದೇ ಕಾನೂನಿನಂತೆ ದತ್ತು ಪಡೆದಿರುವ ಮಗ /ಮಗಳು ಅರ್ಹರಿರುತ್ತಾರೆ. ಆದರೆ ಕಾನೂನು ಬದ್ಧವಾಗಿ ದತ್ತಕ ಪಡೆದಿರುವ ಬಗ್ಗೆ ದಾಖಲೆ / ವ್ಯಾಸಂಗ ಮಾಡಿರುವ ಬಗೆಗಿನ ದಾಖಲೆಗಳಲ್ಲೂ ನಮೂದಿತವಾಗಿರಬೇಕು.

2) ಅಭ್ಯರ್ಥಿಯು ದ್ವಿತೀಯ ಪಿ.ಯು.ಸಿ /12ನೇ ತರಗತಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು, ಎಸ್.ಎಸ್.ಎಲ್.ಸಿ/10ನೇ ತರಗತಿಯ ಅಥವಾ ಪಿ.ಯು.ಸಿ/12ನೇ ತರಗತಿಯಲ್ಲಿ ಈ ಕೆಳಕಂಡ ಭಾಷಾ ವಿಷಯಗಳಲ್ಲಿ ಯಾವುದಾದರೂ ಎರಡು ಭಾಷೆಗಳನ್ನು ಕಡ್ಡಾಯವಾಗಿ ವ್ಯಾಸಂಗ ಮಾಡಿರಬೇಕು.

**ಭಾಷಾ ವಿಷಯಗಳು**:–ಇಂಗ್ಲೀಷ್, ಕನ್ನಡ, ಹಿಂದಿ, ತೆಲುಗು, ಅರೇಬಿಕ್, ತಮಿಳು, ಮಲಯಾಳಂ, ಉರ್ದು, ಮರಾಠಿ, ಸಂಸ್ಕೃತ

3) (i) **ಡಿ.ಪಿ.ಇಡಿ** ಕೋರ್ಸಿಗೆ ಸೇರುವ ಎಲ್ಲಾ ಅಭ್ಯರ್ಥಿಗಳು ದ್ವಿತೀಯ ಪಿ.ಯು.ಸಿ/12ನೇ ತರಗತಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಒಟ್ಟು ಅಂಕಗಳ ಕನಿಷ್ಟ ಶೇಕಡ 50 ಅಂಕಗಳನ್ನು ಪಡೆದಿರಬೇಕು.

(ii) ರಾಜ್ಯ ಅಥವಾ ರಾಷ್ಟ್ರಮಟ್ಟದ ಕ್ರೀಡೆಯಲ್ಲಿ ಪಾಲ್ಗೊಂಡಿದ್ದು ಪ್ರಮಾಣ ಪತ್ರ ಹೊಂದಿರುವ ಅಭ್ಯರ್ಥಿಗಳು ದ್ವಿತೀಯ ಪಿ.ಯು.ಸಿ/12ನೇ ತರಗತಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ **ಒಟ್ಟು ಅಂಕಗಳ ಕನಿಷ್ಟ ಶೇಕಡ 45 ಅಂಕಗಳನ್ನು ಪಡೆದಿರಬೇಕು.**

(iii)ಡಿ.ಪಿ.ಇಡಿ ಕೋರ್ಸಿಗೆ ದಾಖಲಾಗಲು ಅಭ್ಯರ್ಥಿಯ ವಯೋಮಿತಿ, ದಾಖಲಾಗುವ ವರ್ಷದ ಜೂನ್ ಮಾಹೆಯ 30ಕ್ಕೆ 17 ವರ್ಷ ತುಂಬಿರಬೇಕು ಹಾಗೂ ಗರಿಷ್ಠ ವಯೋಮಿತಿ 30 ವರ್ಷಗಳು.

(iv) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭ್ಯರ್ಥಿಗಳು, ಮಾಜಿ ಸೈನಿಕರು ಮತ್ತು ರಕ್ಷಣಾದಳದವರಿಗೆ ದಾಖಲಾಗುವ ವರ್ಷದ ಜೂನ್ ಮಾಹೆಯ 30ಕ್ಕೆ ಕನಿಷ್ಟ 17 ವರ್ಷ ತುಂಬಿರಬೇಕು ಹಾಗೂ ಗರಿಷ್ಠ ವಯೋಮಿತಿ 35 ವರ್ಷಗಳು.

(v) ಅಂಗವಿಕಲ ಅಭ್ಯರ್ಥಿಗಳನ್ನು ಡಿ.ಪಿ.ಇಡಿ ಕೋರ್ಸಿಗೆ ದಾಖಲು ಮಾಡಿಕೊಳ್ಳಲು ಅವಕಾಶವಿರುವುದಿಲ್ಲ. ಅರ್ಹ ಅಭ್ಯರ್ಥಿಗಳು ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪಡೆದ ಶಾರೀರಿಕ ಸುಸ್ಥಿತಿ ಪ್ರಮಾಣ ಪತ್ರವನ್ನು ಪಡೆದಿರಬೇಕು.

**ವಿಶೇಷ ಸೂಚನೆ:–** ಆಯ್ಕೆಯಾದ ಅಭ್ಯರ್ಥಿಗಳು ಕೈಕಾಲು ಹಾಗೂ ಪ್ರಮುಖ ಅಂಗಗಳು ಸರಿಯಾಗಿರುವ ಬಗ್ಗೆ, ಕಿವಿ ಸರಿಯಾಗಿ ಕೇಳುವ ಬಗ್ಗೆ, ಕಣ್ಣಿನ ದೃಷ್ಟಿ ಸ್ಪಷ್ಟವಾಗಿರುವ ಬಗ್ಗೆ ಹಾಗೂ ಗಂಭೀರ ರೋಗ ರುಜಿನಗಳು ಇಲ್ಲದಿರುವ ಬಗ್ಗೆ ವೈದ್ಯಕೀಯ ಮಂಡಳಿಯಿಂದ ಡಿ.ಪಿ.ಇಡಿ ತರಬೇತಿ ಹೊಂದಲು ಅರ್ಹರಾಗಿರುವರೆಂದು ದೃಢೀಕರಿಸಿದ ಶಾರೀರಿಕ ಸುಸ್ಥಿತಿ ಪ್ರಮಾಣ ಪತ್ರ **(Medical Fitness certificate)** ದಾಖಲಾತಿಯ ಸಮಯದಲ್ಲಿ ವ್ಯವಸ್ಥಾಪಕ ಕೇಂದ್ರದಲ್ಲಿ ಸಲ್ಲಿಸುವುದು.

## IV. ಡಿ.ಇಎಲ್.ಇಡಿ, ಡಿ.ಪಿ.ಇಡಿ ಹಾಗೂ ಡಿ.ಪಿ.ಎಸ್.ಇ ಕೋರ್ಸುಗಳಿಗೆ ವಿಶೇಷ ಗುಂಪಿನ ಅರ್ಹತೆಯ ಬಗ್ಗೆ ವಿವರಣೆ:

(1) ರಕ್ಷಣಾ ದಳದವರು :–

ರಕ್ಷಣಾದಳದವರು ಎಂದರೆ–

i) ದಿನಾಂಕ 01–07–2021 ರಿಂದ 30–06–2022 ರವರೆಗೆ ಕರ್ನಾಟಕದಲ್ಲಿ ಸೇವೆ ಸಲ್ಲಿಸುತ್ತಿರುವ ರಕ್ಷಣಾ ದಳದವರು ಅಥವಾ ಅವರ ಪತಿ ಅಥವಾ ಪತ್ನಿ ಅಥವಾ ಮಗ ಅಥವಾ ಅವಿವಾಹಿತ ಮಗಳು.

ಅಥವಾ

ii) ನೌಕರಿಗೆ ಸೇರುವಾಗ ತಮ್ಮ ಉದ್ಯೋಗದಾತರಿಗೆ ಘೋಷಣೆ ಮಾಡಿಕೊಂಡಿರುವ ಮೂಲಸ್ಥಾನ ಕರ್ನಾಟಕವಾಗಿದ್ದು ಪ್ರಸ್ತುತ ಸೇವೆ ಸಲ್ಲಿಸುತ್ತಿರುವ ರಕ್ಷಣಾದಳದವರು ಅಥವಾ ಅವರ ಪತಿ ಅಥವಾ ಪತ್ನಿ ಅಥವಾ ಅವಿವಾಹಿತ ಮಗಳು. ಇಂತಹ ಅಭ್ಯರ್ಥಿಗಳು ತಮ್ಮ ಮೂಲ ಸ್ಥಾನ ಕರ್ನಾಟಕ ಎಂಬುದರ ಬಗೆಗೆ ರಕ್ಷಣಾ ವಿಭಾಗದ ರೆಕಾರ್ಡ್‌ಗಳ ಕಛೇರಿಯಿಂದ ಪ್ರಮಾಣ ಪತ್ರ ಪಡೆದು ದಾಖಲಾತಿಯ ಸಮಯದಲ್ಲಿ ಜಿಲ್ಲಾ ವ್ಯವಸ್ಥಾಪಕ ಕೇಂದ್ರದಲ್ಲಿ ಸಲ್ಲಿಸುವುದು.

ಅಥವಾ

iii) ಕರ್ನಾಟಕದಲ್ಲಿ ಒಂದು ವರ್ಷ ಸೇವೆ ಸಲ್ಲಿಸಿ ಮತ್ತು ಶಾಂತಿಭಂಗ ಸ್ಥಳಗಳಾದ ಜಮ್ಮು ಮತ್ತು ಕಾಶ್ಮೀರ ಅಥವಾ ಈಶಾನ್ಯ ಭಾಗಗಳಿಗೆ ಕರ್ತವ್ಯದ ಮೇಲೆ ಕಳುಹಿಸಲ್ಪಟ್ಟಿದ್ದು, ಅವರ ಕುಟುಂಬ ಕರ್ನಾಟಕದಲ್ಲಿ ವಾಸಿಸಲು ರಕ್ಷಣಾ ಪ್ರಾಧಿಕಾರದಿಂದ ಅನುಮತಿ ಪಡೆದ ರಕ್ಷಣಾದಳದವರ ಪತಿ ಅಥವಾ ಪತ್ನಿ ಅಥವಾ ಮಗ ಅಥವಾ ಅವಿವಾಹಿತ ಮಗಳು.

iv) ಕರ್ನಾಟಕದಲ್ಲಿ ಯಾವುದಾದರೂ ರಕ್ಷಣಾ ಘಟಕದಲ್ಲಿ ನಿಯುಕ್ತಿಗೊಂಡು ಹಾಗೂ ಹಾಲಿ ಕರ್ನಾಟಕದಲ್ಲಿ ಕೆಲಸ ನಿರ್ವಹಿಸುತ್ತಿರುವ ರಕ್ಷಣಾದಳದವರ ಪತಿ ಅಥವಾ ಪತ್ನಿ ಅಥವಾ ಮಗ ಅಥವಾ ಅವಿವಾಹಿತ ಮಗಳು.

**ಸೂಚನೆ**: ಮೇಲ್ಕಂಡ (1) ರಿಂದ (4) ರ ಅಭ್ಯರ್ಥಿಗಳು ಆಯ್ಕೆಗೆ ಬೇಕಾಗುವ ಅರ್ಹತಾ ಪರೀಕ್ಷೆಯನ್ನು ಕರ್ನಾಟಕ ಸರ್ಕಾರ ನಡೆಸುತ್ತಿರುವ ಅಥವಾ ಅದರಿಂದ ಮಾನ್ಯತೆ ಪಡೆದ ಸಂಸ್ಥೆಗಳಿಂದ / ಭಾರತದ ಯಾವುದೇ ರಾಜ್ಯಸರ್ಕಾರ ನಡೆಸುತ್ತಿರುವ ಅಥವಾ ಅದರಿಂದ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳಿಂದ ಉತ್ತೀರ್ಣರಾಗಿರಬೇಕು.

ಈ ವಿಶೇಷ ಗುಂಪಿನ ಸೌಲಭ್ಯ ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ಅನುಬಂಧ–02 ರಲ್ಲಿ ತೋರಿಸಿರುವ ಮಾದರಿಯಲ್ಲಿ ಸಕ್ಷಮ ಅಧಿಕಾರಿಗಳಿಂದ ಮೇಲು ಸಹಿ ಮಾಡಿಸಿರುವ ಸೈನಿಕ ಪ್ರಮಾಣ ಪತ್ರವನ್ನು ದಾಖಲಾತಿಯ ಸಮಯದಲ್ಲಿ ವ್ಯವಸ್ಥಾಪಕ ಕೇಂದ್ರದಲ್ಲಿ ಸಲ್ಲಿಸಬೇಕು.

**ವಿಶೇಷ ಸೂಚನೆ:–** ರಕ್ಷಣಾದಳದವರು ಹಾಗೂ ಮಾಜಿ ಸೈನಿಕ ಈ ಎರಡು ಗುಂಪುಗಳಲ್ಲಿ ಯಾವುದೇ ಒಂದು ಗುಂಪಿನಲ್ಲಿ ಸಾಕಷ್ಟು ಅರ್ಹ ಅಭ್ಯರ್ಥಿಗಳು ದೊರೆಯದ ಪಕ್ಷದಲ್ಲಿ ಮತ್ತೊಂದು ಗುಂಪಿನ ಅರ್ಹ ಅಭ್ಯರ್ಥಿಗಳಿಂದ ತುಂಬಲಾಗುವುದು.

(2) **ಮಾಜಿ ಸೈನಿಕರು:** ಮಾಜಿ ಸೈನಿಕರೆಂದರೆ ಭಾರತೀಯ ರಕ್ಷಣಾದಳಗಳಾದ ಭೂ, ವಾಯು, ನೌಕಾ ದಳಗಳಲ್ಲಿ ಯಾವುದೇ ದರ್ಜೆಯಲ್ಲಿ ಯೋಧನಾಗಿ ಇಲ್ಲವೆ ಯೋಧನಲ್ಲದೆ ಸೇವೆ ಸಲ್ಲಿಸಿದ್ದು ಮತ್ತು ಸೇವೆಗೆ ಸೇರುವಾಗ ತನ್ನ ಮೂಲ ಸ್ವಗ್ರಾಮ ಕರ್ನಾಟಕದಲ್ಲಿರುವುದೆಂದು ಘೋಷಣೆ ಮಾಡಿರುವ ವ್ಯಕ್ತಿ.

ಮತ್ತು

i) ಇಂತಹ ಸೇವೆಯಿಂದ ನಿವೃತ್ತಿ ಹೊಂದಿ ನಿವೃತ್ತಿ ವೇತನ ಪಡೆಯುತ್ತಿರುವವರು

ಅಥವಾ

ii) ವೈದ್ಯಕೀಯ ಕಾರಣದ ಮೇರೆಗೆ ಮಿಲಿಟರಿ ಸೇವೆಗೆ ಅನರ್ಹನೆಂದು ಅಥವಾ ತನ್ನ ಹತೋಟಿಗೆ ಮೀರಿದ ಪರಿಸ್ಥಿತಿಗಳಿಂದ ಮತ್ತು ವೈದ್ಯಕೀಯ ಅಥವಾ ಅಸಾಮರ್ಥ್ಯದ ಪಿಂಚಣಿ ಪಡೆದು ಸೇವೆಯಿಂದ ಬಿಡುಗಡೆಯಾದವರು.

ಅಥವಾ

iii) ಸ್ವಇಚ್ಛೆಯಿಂದಲ್ಲದೆ ಸಿಬ್ಬಂದಿ ಕಡಿತಗೊಳಿಸಿದ ಪರಿಣಾಮ ಸೇವೆಯಿಂದ ಬಿಡುಗಡೆಯಾದವರು

ಅಥವಾ

iv) ಸ್ವಇಚ್ಛೆಯಿಂದ ಅಥವಾ ದುರ್ವರ್ತನೆ ಅಥವಾ ಅಸಾಮರ್ಥ್ಯ ಕಾರಣದಿಂದಾಗಿ ಕರ್ತವ್ಯದಿಂದ ತೆಗೆದುಹಾಕಿದ ಅಥವಾ ವಜಾ ಮಾಡಿದ ವ್ಯಕ್ತಿಯನ್ನು ಹೊರತುಪಡಿಸಿ ನಿರ್ದಿಷ್ಟ ಅವಧಿ ಪೂರೈಸಿದ ತರುವಾಯ ಬಿಡುಗಡೆ ಹೊಂದಿದ ವ್ಯಕ್ತಿ ಮತ್ತು ಗ್ರಾಚ್ಯುಯಿಟಿ ಪಡೆದ ವ್ಯಕ್ತಿ ಮತ್ತು ಪ್ರಾಂತೀಯ ಸೇವೆಯ ಈ ಕೆಳಗೆ ಹೆಸರಿಸಿದ ಸಿಬ್ಬಂದಿ.

ಅ) ನಿರಂತರ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಪಿಂಚಣಿದಾರ

ಆ) ಮಿಲಿಟರಿ ಸೇವೆ ಪರಿಣಾಮ ದೈಹಿಕ ಅಸಾಮರ್ಥ್ಯತೆ ಹೊಂದಿ ಬಿಡುಗಡೆಯಾದ ಪಿಂಚಣಿದಾರ

ಇ) ಡಿಫೆನ್ಸ್ ಸೆಕ್ಯೂರಿಟಿ ಕಾರ್ಪ್ಸ್, ಜನರಲ್ ರಿಸರ್ವ್ ಇಂಜಿನಿಯರಿಂಗ್ ಫೋರ್ಸ್, ಲೋಕ ಸಹಾಯಕ ಸೇನೆ ಮತ್ತು ಪ್ಯಾರಾ ಮಿಲಿಟರಿ ದಳದಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿಯನ್ನು ಹೊರತುಪಡಿಸಿ ಶೌರ್ಯ ಪ್ರಶಸ್ತಿ (ಗ್ಯಾಲಂಟ್ರಿ ಅವಾರ್ಡ್ಸ್) ವಿಜೇತರು ಮೇಲಿನ ನಾಲ್ಕನೇ ಸಬ್ ಕ್ಲಾಸಿನಲ್ಲಿರುವವರನ್ನು ಹೊರತುಪಡಿಸಿ ದಿನಾಂಕ 1–7–87ಕ್ಕೆ ಮುಂಚೆ ಗೌರವಾನ್ವಿತ ವಿಮುಕ್ತಿ ಹೊಂದಿದ ಹಾಗೂ ಕನಿಷ್ಠ 5 ವರ್ಷಗಳ ಸೇವೆ ಸಲ್ಲಿಸಿದ ವ್ಯಕ್ತಿಯನ್ನು ಮಾಜಿ ಯೋಧನೆಂದು ಪರಿಗಣಿಸಲಾಗುವುದು.

**ಸೂಚನೆ:–** 1. ಮೇಲ್ಕಂಡ (1) ರಿಂದ (4) ರ ಅಭ್ಯರ್ಥಿಗಳು ಆಯ್ಕೆಗೆ ಬೇಕಾಗುವ ಅರ್ಹತಾ ಪರೀಕ್ಷೆಯನ್ನು ಕರ್ನಾಟಕ ಸರ್ಕಾರ ನಡೆಸುತ್ತಿರುವ ಅಥವಾ ಅದರಿಂದ ಮಾನ್ಯತೆ ಪಡೆದ ಸಂಸ್ಥೆಗಳಿಂದ / ಭಾರತದ ಯಾವುದೇ ರಾಜ್ಯಸರ್ಕಾರ ನಡೆಸುತ್ತಿರುವ ಅಥವಾ ಅದರಿಂದ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳಿಂದ ಉತ್ತೀರ್ಣರಾಗಿರಬೇಕು.

3. ಮಾಜಿ ಸೈನಿಕರು ಅಥವಾ ಅವರ ಪತಿ /ಪತ್ನಿ/ಮಗ/ಅವಿವಾಹಿತ ಮಗಳು ಈ ಸೌಲಭ್ಯಕ್ಕೆ ಅರ್ಹರು. ಈ ವಿಶೇಷ ಗುಂಪಿನ ಸೌಲಭ್ಯ ಪಡೆಯಲು ಅಭ್ಯರ್ಥಿಯು ಅನುಬಂಧ–03 ರಲ್ಲಿ ತೋರಿಸಿರುವ ಮಾದರಿಯಲ್ಲಿ

ಸಕ್ಷಮ ಅಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರವನ್ನು ದಾಖಲಾತಿಯ ಸಮಯದಲ್ಲಿ ವ್ಯವಸ್ಥಾಪಕ ಕೇಂದ್ರದಲ್ಲಿ ಸಲ್ಲಿಸಬೇಕು.

(3) **ಗಡಿನಾಡು ಕನ್ನಡಿಗರು**: ಗಡಿನಾಡು ಕನ್ನಡಿಗರು ಎಂದರೆ ವಿವಾದಗ್ರಸ್ತ ಕನ್ನಡ ಮಾತನಾಡುವ ಪ್ರದೇಶದಲ್ಲಿದ್ದು ಕನ್ನಡ/ಕೊಡವ/ತುಳು ಮಾತೃಭಾಷೆಯಾಗಿರುವ ಅಭ್ಯರ್ಥಿಗಳು, ವಿವಾದಗ್ರಸ್ತ ಪ್ರದೇಶಗಳಾದ ಮಹಾರಾಷ್ಟ್ರ ರಾಜ್ಯದ ದಕ್ಷಿಣ ಸೋಲ್ಲಾಪುರ, ಅಕ್ಕಲಕೋಟೆ, ಜತ್ ಮತ್ತು ಗಧಿಂಗ್ಲಾಜ್ ತಾಲ್ಲೂಕುಗಳು ಅಥವಾ ಕೇರಳ ರಾಜ್ಯದ ಕಾಸರಗೋಡ್ ತಾಲ್ಲೂಕುಗಳಲ್ಲಿ ವಾಸಿಸುವವರು. ಈ ಸೌಲಭ್ಯ ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ಈ ಕೆಳಕಂಡ ದಾಖಲೆಗಳನ್ನು ದಾಖಲಾತಿಯ ಸಮಯದಲ್ಲಿ ವ್ಯವಸ್ಥಾಪಕ ಕೇಂದ್ರದಲ್ಲಿ ಸಲ್ಲಿಸಬೇಕು.

1. ಮಾತೃಭಾಷೆ ಕನ್ನಡ / ಕೊಡವ / ತುಳು ಆಗಿರುವ ಬಗೆಗೆ ವ್ಯಾಸಂಗ ಮಾಡಿದ ಸಂಸ್ಥೆಯ /ಶಾಲೆಯ ಮುಖ್ಯಸ್ಥರಿಂದ ಪಡೆದ ವ್ಯಾಸಂಗ ಪ್ರಮಾಣ ಪತ್ರ /ವರ್ಗಾವಣೆ ಪತ್ರ. ಈ ಪ್ರಮಾಣ ಪತ್ರವು ಆಯಾ ಜಿಲ್ಲೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ದೃಢೀಕರಿಸಲ್ಪಟ್ಟಿರಬೇಕು. ದೃಢೀಕರಿಸಿದ ಅಧಿಕಾರಿಯ ಹೆಸರು, ಪೂರ್ಣ ವಿಳಾಸ, ದೂರವಾಣಿ ಸಂಖ್ಯೆ ಇವುಗಳನ್ನು ಪ್ರಮಾಣ ಪತ್ರದಲ್ಲಿ ಸ್ಪಷ್ಟವಾಗಿ ನಮೂದಿಸಿರಬೇಕು.
2. ಅಭ್ಯರ್ಥಿಯು ವಿವಾದಗ್ರಸ್ಥ ಕನ್ನಡ ಮಾತನಾಡುವ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆಂಬುದರ ಬಗ್ಗೆ ಸಂಬಂಧಪಟ್ಟ ತಹಶೀಲ್ದಾರ್‌ರವರಿಂದ ಪಡೆದ ವಾಸಸ್ಥಳದ ಪ್ರಮಾಣ ಪತ್ರ.

(4) **ಹೊರನಾಡು ಕನ್ನಡಿಗರು:** ಹೊರನಾಡು ಕನ್ನಡಿಗರು ಎಂದರೆ, ದಾಖಲಾತಿ ಬಯಸುವ ವರ್ಷದ ಜುಲೈ 1ಕ್ಕೆ ಕನಿಷ್ಠ ಐದು ವರ್ಷಗಳಿಂದ ಕರ್ನಾಟಕ ರಾಜ್ಯದ ಹೊರಗೆ ಮತ್ತು ಭಾರತದ ಪ್ರಾಂತ್ಯದೊಳಗೆ ವಾಸಿಸುತ್ತಿರುವ, ಮಾತೃಭಾಷೆ ಕನ್ನಡ/ಕೊಡವ/ತುಳು ಆಗಿರುವ ಅಭ್ಯರ್ಥಿಗಳು. ಆಯ್ಕೆಗೆ ಬೇಕಾಗುವ ವಿದ್ಯಾರ್ಹತೆ ಪರೀಕ್ಷೆಯನ್ನು ಅಭ್ಯರ್ಥಿಗಳು ಹೊರರಾಜ್ಯದ ವಿಶ್ವವಿದ್ಯಾಲಯ/ಪರೀಕ್ಷಾಮಂಡಳಿ/ಯಾವುದೇ ವಿದ್ಯಾಸಂಸ್ಥೆಯಿಂದ ಪಾಸು ಮಾಡಿರಬೇಕು. ಈ ಸೌಲಭ್ಯ ಪಡೆಯಲು ಅಭ್ಯರ್ಥಿಗಳು ಈ ಕೆಳಕಂಡ ದಾಖಲೆಗಳನ್ನು ದಾಖಲಾತಿಯ ಸಮಯದಲ್ಲಿ ವ್ಯವಸ್ಥಾಪಕ ಕೇಂದ್ರದಲ್ಲಿ ಒದಗಿಸಬೇಕು.

1. ಮಾತೃಭಾಷೆ ಕನ್ನಡ/ಕೊಡವ/ತುಳು ಆಗಿರುವ ಬಗ್ಗೆ ವ್ಯಾಸಂಗ ಮಾಡಿದ ಸಂಸ್ಥೆಯ / ಶಾಲೆಯ ಮುಖ್ಯಸ್ಥರಿಂದ ಪಡೆದ ವ್ಯಾಸಂಗ ಪ್ರಮಾಣ ಪತ್ರ/ ವರ್ಗಾವಣೆ ಪ್ರಮಾಣ ಪತ್ರ. ಈ ಪ್ರಮಾಣ ಪತ್ರವು ಆಯಾ ಜಿಲ್ಲೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ದೃಢೀಕರಿಸಲ್ಪಟ್ಟಿರಬೇಕು. ದೃಢೀಕರಿಸಿದ ಅಧಿಕಾರಿಯ ಹೆಸರು, ಪೂರ್ಣ ವಿಳಾಸ, ದೂರವಾಣಿ ಸಂಖ್ಯೆ ಇವುಗಳನ್ನು ಪ್ರಮಾಣ ಪತ್ರದಲ್ಲಿ ಸ್ಪಷ್ಟವಾಗಿ ನಮೂದಿಸಿರಬೇಕು.
2. **ದಿನಾಂಕ 01–07–2022ಕ್ಕೆ ಅಂದರೆ ಜೂನ್ 2017**ರಿಂದ ಈ ದಿನಕ್ಕೆ ಅಭ್ಯರ್ಥಿಯು ಕನಿಷ್ಟ ಐದು ವರ್ಷಗಳ ಕಾಲ ಹೊರರಾಜ್ಯದಲ್ಲಿ ಸತತವಾಗಿ ವಾಸಿಸಿದ ಬಗೆಗೆ ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರ್‌ರವರಿಂದ ಪಡೆದ ವಾಸಸ್ಥಳ ಪ್ರಮಾಣ ಪತ್ರ.

**ವಿಶೇಷ ಸೂಚನೆ:** ಹೊರನಾಡು ಮತ್ತು ಗಡಿನಾಡು ಕನ್ನಡಿಗ ಮೀಸಲಾತಿಯಡಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು **ಕನ್ನಡ ಭಾಷೆಯನ್ನು ಮಾತನಾಡಲು/ಓದಲು/ಬರೆಯಲು ಸಮರ್ಥರಿರಬೇಕು.** ಇದಕ್ಕೆ ಸಂಬಂಧಿಸಿದಂತೆ ಕೇಂದ್ರೀಕೃತ ದಾಖಲಾತಿ ಘಟಕವು ನಡೆಸುವ ಕನ್ನಡ ಭಾಷಾ ಮೌಖಿಕ/ಲಿಖಿತ ಪರೀಕ್ಷೆಗೆ ಹಾಜರಾಗುವುದು. ಆದರೆ 10ನೇ ತರಗತಿ / ತತ್ಸಮಾನ ಪರೀಕ್ಷೆ ಅಥವಾ 12ನೇ ತರಗತಿ / ತತ್ಸಮಾನ ಪರೀಕ್ಷೆಯಲ್ಲಿ ಪ್ರಥಮ, ದ್ವಿತೀಯ ಅಥವಾ ತೃತೀಯ ಭಾಷೆಯಾಗಿ ಕನ್ನಡವನ್ನು ಅಭ್ಯಾಸ ಮಾಡಿದಲ್ಲಿ ಕನ್ನಡ ಪರೀಕ್ಷೆಗೆ ಹಾಜರಾಗುವ ಅವಶ್ಯಕತೆ ಇಲ್ಲ.

(5) **ಎನ್.ಸಿ.ಸಿ. ಕೆಡೆಟ್ಸ್**

(i) ಎನ್.ಸಿ.ಸಿ. ಮಹಾನಿರ್ದೇಶನಾಲಯ, ಹೊಸದೆಹಲಿ ಇವರು ನಡೆಸುವ ಗಣರಾಜ್ಯೋತ್ಸವ ದಿನಾಚರಣೆ ಶಿಬಿರದಲ್ಲಿ ಕರ್ನಾಟಕದಿಂದ ಭಾಗವಹಿಸಿರುವ ಹಾಗೂ ಕರ್ನಾಟಕ ರಾಜ್ಯದಲ್ಲಿ ತರಗತಿ 8 ರಿಂದ 12 ರವರೆವಿಗೆ ವ್ಯಾಸಂಗ ಮಾಡುವ ಸಂದರ್ಭದಲ್ಲಿ ಕನಿಷ್ಟ ಎನ್.ಸಿ.ಸಿ. 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು **ಅಥವಾ**

(ii) ಎನ್.ಸಿ.ಸಿ. ಮಹಾನಿರ್ದೇಶನಾಲಯ, ಹೊಸದೆಹಲಿ ಇವರು ನಡೆಸುವ ಈ ಕೆಳಕಂಡ ಶಿಬಿರಗಳಲ್ಲಿ ಕರ್ನಾಟಕದಿಂದ ಭಾಗವಹಿಸಿರುವ ಹಾಗೂ ಕರ್ನಾಟಕ ರಾಜ್ಯದಲ್ಲಿ ತರಗತಿ 8 ರಿಂದ 12 ರವರೆವಿಗೆ ವ್ಯಾಸಂಗ ಮಾಡುವ ಸಂದರ್ಭದಲ್ಲಿ ಕನಿಷ್ಟ ಎನ್.ಸಿ.ಸಿ. 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು.

(ಅ) ಅಖಿಲ ಭಾರತ ತಲ್ (Thal) ಸೈನಿಕ್ ಶಿಬಿರ (ಬಾಲಕರು)

(ಆ) ಅಖಿಲ ಭಾರತ ತಲ್ (Thal) ಸೈನಿಕ್ ಶಿಬಿರ (ಬಾಲಕಿಯರು)

(ಇ) ಅಖಿಲ ಭಾರತ ನೌಕಾ ಸೈನಿಕ್ ಶಿಬಿರ

(ಈ) ಅಖಿಲ ಭಾರತ ವಾಯು ಸೈನಿಕ್ ಶಿಬಿರ

ಹಾಗೂ

ಯೂತ್ ಎಕ್ಸ್‌ಚೇಂಜ್ ಪ್ರೋಗ್ರಾಮ್ಸ್ ಮತ್ತು ಫಾರಿನ್ ನಾವೆಲ್ ಕ್ರೂಸ್ ಮತ್ತು ಪರ್ವತಾರೋಹಣ ಸಾಹಸ ಯಾತ್ರೆ (5900 ಮೀಟರುಗಳಿಗಿಂತ ಹೆಚ್ಚು), ಗಾಳಿ ಶಕ್ತಿಯನ್ನು ಮಾತ್ರ ಉಪಯೋಗಿಸಿ ನೌಕಾಯಾನ ಸಾಹಸ ಯಾತ್ರೆ (401 ಕಿ.ಮೀ) ಮೋಟಾರ್ ಸೈಕಲ್ ಸಾಹಸ ಯಾತ್ರೆ (3500 ಕಿ.ಮೀ.ಗಳಿಗಿಂತ ಜಾಸ್ತಿ) ಮತ್ತು ಸೈಕಲಿಂಗ್ ಸಾಹಸ ಯಾತ್ರೆ (1500 ಕಿ.ಮೀ.ಗಳಿಗಿಂತ ಜಾಸ್ತಿ) ಯನ್ನು ಪೂರ್ಣಗೊಳಿಸಿರಬೇಕು.

(iii) ಎನ್.ಸಿ.ಸಿ. ಮಹಾನಿರ್ದೇಶನಾಲಯ, ಹೊಸದೆಹಲಿ ಮತ್ತು ಡೆಪ್ಯೂಟಿ ಡೈರಕ್ಟರ್ ಜನರಲ್, ಎನ್.ಸಿ.ಸಿ. ನಿರ್ದೇಶನಾಲಯ, ಕರ್ನಾಟಕ ಮತ್ತು ಗೋವಾ ಇವರು ನಡೆಸುವ ಈ ಕೆಳಕಂಡ ಶಿಬಿರ/ ಕೋರ್ಸುಗಳಲ್ಲಿ ಕರ್ನಾಟಕದಿಂದ ಭಾಗವಹಿಸಿರುವ ಮತ್ತು ಕರ್ನಾಟಕ ರಾಜ್ಯದಲ್ಲಿ ತರಗತಿ 8 ರಿಂದ 12 ರವರೆವಿಗೆ ವ್ಯಾಸಂಗ ಮಾಡುವ ಸಂದರ್ಭದಲ್ಲಿ ಕನಿಷ್ಟ ಎನ್.ಸಿ.ಸಿ 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು :

(ಅ) ರಾಷ್ಟ್ರೀಯ ಭಾವೈಕ್ಯತಾ ಶಿಬಿರ

(ಆ) ಚಾರಣ ಶಿಬಿರ

(ಇ) ಪರ್ವತಾರೋಹಣ ಕೋರ್ಸು

(ಈ) ಮೂಲ ನಾಯಕತ್ವ ಶಿಬಿರ

(ಉ) ಉನ್ನತ ನಾಯಕತ್ವ ಶಿಬಿರ

(ಊ) ರಾಕ್ ಕ್ಲೈಂಬಿಂಗ್ ಟ್ರೈನಿಂಗ್

(ಋ) ಭೂದಳ, ವಾಯುದಳ, ನೌಕಾದಳ ಮತ್ತು ಅವುಗಳ ವೈದ್ಯಕೀಯ ಸೇವೆಗಳು.

(iv) ಕರ್ನಾಟಕ ರಾಜ್ಯದಲ್ಲಿ 8 ರಿಂದ 12ನೇ ತರಗತಿಯವರೆಗೆ ವ್ಯಾಸಂಗ ಮಾಡುವ ಸಂದರ್ಭದಲ್ಲಿ ಕನಿಷ್ಠ ಎನ್.ಸಿ.ಸಿ. 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು.

ಆದರೆ ಎನ್.ಸಿ.ಸಿ. ಕೋಟಾದಡಿಯಲ್ಲಿ ಮೀಸಲಾಗಿರುವ ಸೀಟುಗಳಿಗೆ ಅಭ್ಯರ್ಥಿಗಳನ್ನು ಈ ಕೆಳಗಿನ ಆದ್ಯತೆಯಲ್ಲಿ ಆಯ್ಕೆಮಾಡಲಾಗುವುದು.

1. ಗಣರಾಜ್ಯೋತ್ಸವ ಶಿಬಿರದಲ್ಲಿ ಪಾಲ್ಗೊಂಡು ಸ್ವರ್ಣ /ರಜತ /ಕಂಚು ಪದಕವನ್ನು ಪಡೆದು ಅಖಿಲ ಭಾರತ ಅತ್ಯುತ್ತಮ ಕೆಡೆಟ್ ಎಂದು ಪರಿಗಣಿಸಿ ಎನ್.ಸಿ.ಸಿ. 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು.
2. ಅನುಚ್ಛೇದ 1 ರಲ್ಲಿ ನಮೂದಿಸಿರುವ ಶಿಬಿರಗಳಲ್ಲಿ ಭಾಗವಹಿಸಿ ಸ್ವರ್ಣ/ರಜತ / ಕಂಚು ಪದಕವನ್ನು ಪಡೆದು ಅಖಿಲ ಭಾರತ ಅತ್ಯುತ್ತಮ ಕೆಡೆಟ್ ಎಂದು ಪರಿಗಣಿಸಿ ಎನ್.ಸಿ.ಸಿ. 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು.
3. ಕರ್ನಾಟಕದಿಂದ ಗಣರಾಜ್ಯೋತ್ಸವ ದಿನಾಚರಣೆ ಶಿಬಿರದಲ್ಲಿ ಪಾಲ್ಗೊಂಡು ಎನ್.ಸಿ.ಸಿ. 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು.

4. ಕರ್ನಾಟಕದಿಂದ ಅನುಚ್ಛೇದ (ii) ರಲ್ಲಿ ನಮೂದಿಸಿರುವ ಶಿಬಿರಗಳಲ್ಲಿ ಪಾಲ್ಗೊಂಡು ಎನ್.ಸಿ.ಸಿ. 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು.
5. ಕರ್ನಾಟಕದಿಂದ ಅನುಚ್ಛೇದ (iii) ರಲ್ಲಿ ನಮೂದಿಸಿರುವ ಶಿಬಿರಗಳಲ್ಲಿ ಪಾಲ್ಗೊಂಡು ಎನ್.ಸಿ.ಸಿ. 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು.
6. ಅನುಚ್ಛೇದ (v) ರಲ್ಲಿನ ಅಭ್ಯರ್ಥಿಗಳನ್ನು ಪರಿಗಣಿಸುವ ಮೊದಲು ಅನುಚ್ಛೇದ (iv) ರಲ್ಲಿ ನಮೂದಿಸಿರುವ ಶಿಬಿರಗಳಲ್ಲಿ ಪಾಲ್ಗೊಂಡು ಎನ್.ಸಿ.ಸಿ. 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು.

ಅನುಚ್ಛೇದ (v) ರಲ್ಲಿನ ಅಭ್ಯರ್ಥಿಗಳು ಅಂದರೆ ಎನ್.ಸಿ.ಸಿ. 'ಬಿ' ಸರ್ಟಿಫಿಕೇಟನ್ನು ಮಾತ್ರ ಹೊಂದಿರುವ ಅಭ್ಯರ್ಥಿಗಳು ಉಳಿದ ಎನ್.ಸಿ.ಸಿ. ಸೀಟುಗಳಿಗೆ ಸಾಮಾನ್ಯ ವರ್ಗದ ಅಭ್ಯರ್ಥಿಗಳು ಮತ್ತು ಉಳಿದ ವರ್ಗಗಳ ಮೀಸಲಾತಿಯ ಅಭ್ಯರ್ಥಿಗಳೊಂದಿಗೆ ಮೆರಿಟ್ ಅನ್ವಯ ಸೀಟನ್ನು ಆಯ್ಕೆಮಾಡಿಕೊಳ್ಳಬಹುದು.

(6) **ಎನ್.ಎಸ್.ಎಸ್. ಸ್ವಯಂ ಸೇವಕರು:** ರಾಷ್ಟ್ರೀಯ ಸೇವಾ ಯೋಜನೆಯಡಿಯಲ್ಲಿ ಕನಿಷ್ಟ ಎರಡು ವರ್ಷ ಸೇವೆ ಸಲ್ಲಿಸಿದ್ದು, ಕನಿಷ್ಟ ಎರಡು ಶಿಬಿರಗಳಲ್ಲಿ ಭಾಗವಹಿಸಿದ ಬಗೆಗೆ ಸಕ್ಷಮ ಅಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ ಹೊಂದಿರುವವರು ಈ ಸೌಲಭ್ಯಕ್ಕೆ ಅರ್ಹರಿರುತ್ತಾರೆ. ಹಾಗೂ ಈ ಪ್ರಮಾಣ ಪತ್ರವನ್ನು ದಾಖಲಾತಿಯ ಸಮಯದಲ್ಲಿ ಜಿಲ್ಲಾ ವ್ಯವಸ್ಥಾಪಕ ಕೇಂದ್ರದಲ್ಲಿ ಸಲ್ಲಿಸತಕ್ಕದ್ದು.

(7) **ಕ್ರೀಡಾಪಟುಗಳು ಎಂದರೆ**: ತರಗತಿ 8 ರಿಂದ 12 ರವರೆಗಿನ ವ್ಯಾಸಂಗದ ಐದು ವರ್ಷಗಳ ಅವಧಿಯಲ್ಲಿ ರಾಜ್ಯ/ರಾಷ್ಟ್ರ ಮಟ್ಟದ ಕ್ರೀಡೆ ಅಥವಾ ಆಟೋಟಗಳು ಅಥವಾ ಪಂದ್ಯಾವಳಿಗಳಲ್ಲಿ ಕರ್ನಾಟಕದಿಂದ ಭಾಗವಹಿಸಿರುವ ಅಭ್ಯರ್ಥಿಗಳು.

ಕ್ರೀಡೆ / ಆಟೋಟಗಳು / ಪಂದ್ಯಾವಳಿಗಳನ್ನು ಆಯೋಜಿಸುವ ಪ್ರಾಧಿಕಾರಗಳು : 1. ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆ 2. ಯುವಜನ ಸೇವಾ ಮತ್ತು ಕ್ರೀಡಾ ನಿರ್ದೇಶನಾಲಯ. ಈ ಸಕ್ಷಮ ಪ್ರಾಧಿಕಾರಗಳು ನೀಡಿರುವ ಪ್ರಮಾಣ ಪತ್ರಗಳನ್ನು ಹಾಜರು ಪಡಿಸುವ ಅಭ್ಯರ್ಥಿಗಳು ಕ್ರೀಡಾಪಟುಗಳ ಕೋಟಾದಲ್ಲಿ ಆಯ್ಕೆಯಾಗಲು ಅರ್ಹರು.

(8) **ಸ್ಕೌಟ್ ಮತ್ತು ಗೈಡ್ಸ್ :** ಸ್ಕೌಟ್ ಮತ್ತು ಗೈಡ್ಸ್‌ನಲ್ಲಿ ಕನಿಷ್ಟ ಮೂರು ವರ್ಷಗಳ ಕಾಲ ಸೇವೆ ಸಲ್ಲಿಸಿ, ಭಾರತ್ ಸ್ಕೌಟ್ ಮತ್ತು ಗೈಡ್ಸ್‌ನಿಂದ ರಾಜ್ಯಮಟ್ಟದಲ್ಲಿ ನಡೆಸಲಾದ ಜಾಂಬೂರಿಗಳಲ್ಲಿ ಭಾಗವಹಿಸಿರಬೇಕು. ಅಥವಾ ಸ್ಕೌಟ್ ಮತ್ತು ಗೈಡ್ಸ್‌ನಲ್ಲಿ ರಾಜ್ಯ ಪುರಸ್ಕಾರ ಪ್ರಮಾಣ ಪತ್ರ ಅಥವಾ ರಾಷ್ಟ್ರಪತಿಗಳ ಪ್ರಮಾಣ ಪತ್ರ ಪಡೆದಿರಬೇಕು. ಈ ಸೌಲಭ್ಯ ಪಡೆಯಲು ಸಕ್ಷಮ ಅಧಿಕಾರಿಗಳಿಂದ ಪ್ರಮಾಣ ಪತ್ರ ಪಡೆದು ಸಲ್ಲಿಸಬೇಕು. ಕನಿಷ್ಟ ಮೂರು ವರ್ಷಗಳ ಸೇವೆಯ ಬಗೆಗೆ ಶಾಲೆಯಿಂದ ಪ್ರಮಾಣ ಪತ್ರ ಪಡೆದು ಜಿಲ್ಲಾ ಸ್ಕೌಟ್ ಮತ್ತು ಗೈಡ್ಸ್ ಕಮೀಷನ್‌ರವರಿಂದ ಮೇಲುಸಹಿ ಮಾಡಿಸಿ ದಾಖಲಾತಿಯ ಸಮಯದಲ್ಲಿ ವ್ಯವಸ್ಥಾಪಕ ಕೇಂದ್ರದಲ್ಲಿ ಸಲ್ಲಿಸತಕ್ಕದ್ದು.

(9) **ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ** ಇಲಾಖೆ ವತಿಯಿಂದ ಪ್ರಾಯೋಜಿಸಲ್ಪಟ್ಟ ಸುಧಾರಣಾ ಸಂಸ್ಥೆಗಳಲ್ಲಿ (**correctional Institutions**) ವ್ಯಾಸಂಗ ಮಾಡಿದ ಅಭ್ಯರ್ಥಿಗಳು, ಸಂಸ್ಥೆಯ ಮುಖ್ಯಸ್ಥರು ನೀಡಿದ ಪ್ರಮಾಣ ಪತ್ರ ದಾಖಲಾತಿಯ ಸಮಯದಲ್ಲಿ ವ್ಯವಸ್ಥಾಪಕ ಕೇಂದ್ರ / ಕೇಂದ್ರೀಕೃತ ದಾಖಲಾತಿ ಘಟಕ ಇಲ್ಲಿ ಸಲ್ಲಿಸಬೇಕು. ಈ ಪ್ರಮಾಣ ಪತ್ರವು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹನಿರ್ದೇಶಕರಿಂದ ಮೇಲು ಸಹಿಯಾಗಿರಬೇಕು.

ದಾಖಲಾತಿ ಪ್ರಕ್ರಿಯೆಯಲ್ಲಿ ಅನಿವಾರ್ಯ ಬದಲಾವಣೆಗಳನ್ನು ಮಾಡಲು, ಸಲಹಾ ಸಮಿತಿಯ ಅನುಮೋದನೆ ಕಾಯ್ದಿರಿಸಿ, ವಿಶೇಷಾಧಿಕಾರಿಗಳು ಹಕ್ಕು ಹೊಂದಿರುತ್ತಾರೆ.

## V. ಸೀಟುಗಳ ಹಂಚಿಕೆ ಮತ್ತು ಮೀಸಲಾತಿ :–

ಲಭ್ಯವಿರುವ ಒಟ್ಟು ಸರ್ಕಾರಿ ಸೀಟುಗಳಲ್ಲಿ ಈ ಕೆಳಕಂಡ ವಿಶೇಷ ಗುಂಪುಗಳಿಗೆ ಕಾಯ್ದಿರಿಸಲಾಗಿರುವ ಶೇ. 1 ರಷ್ಟು ಸೀಟುಗಳನ್ನು ಪ್ರಚಲಿತ ನಿಮಯಗಳನ್ವಯ ತುಂಬಲಾಗುವುದು.

| | | |
|---|---|---|
| i. | ರಕ್ಷಣಾ ದಳದ ವ್ಯಕ್ತಿ ಅಥವಾ ಆ ವ್ಯಕ್ತಿಯ ಪತಿ /ಪತ್ನಿ /ಮಗ /ಮಗಳು | 0.13% |
| ii. | ಮಾಜಿ ಸೈನಿಕ ಅಥವಾ ಆ ವ್ಯಕ್ತಿಯ ಪತಿ / ಪತ್ನಿ / ಮಗ /ಮಗಳು | 0.13% |
| iii. | ಗಡಿನಾಡು ಕನ್ನಡಿಗ | 0.07% |
| iv. | ಹೊರನಾಡು ಕನ್ನಡಿಗ | 0.07% |
| v. | ಎನ್.ಸಿ.ಸಿ. ಕೆಡೆಟ್ಸ್ | 0.13% |
| vi. | ಎನ್. ಎಸ್.ಎಸ್. | 0.07% |
| vii. | ಕ್ರೀಡಾ ಪಟುಗಳು | 0.22% |
| viii. | ಸ್ಕೌಟ್ಸ್ ಮತ್ತು ಗೈಡ್ಸ್‌ಗಳು | 0.13%. |
| ix. | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾವತಿಯಿಂದ ಪ್ರಾಯೋಜಿಸಲ್ಪಟ್ಟು ಸುಧಾರಣ ಸಂಸ್ಥೆಗಳಲ್ಲಿ (**Correctional Institution**) ವ್ಯಾಸಂಗ ಮಾಡಿದ ಅಭ್ಯರ್ಥಿಗಳು | 0.05% |

ವಿಶೇಷ ಗುಂಪುಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ ನಂತರ ಉಳಿಯುವ ಸರ್ಕಾರಿ ಸೀಟುಗಳನ್ನು ಮೆರಿಟ್ ಹಾಗೂ ಮೀಸಲಾತಿ ಅನ್ವಯ ಶೇಕಡ 50 ರಷ್ಟು ಕಲಾ ವಿಭಾಗಕ್ಕೆ ಮತ್ತು ಶೇಕಡ 50 ರಷ್ಟು ವಿಜ್ಞಾನ ವಿಭಾಗಕ್ಕೆ ಹಂಚಿಕೆ ಮಾಡಲಾಗುವುದು.

ವಿವಿಧ ಪ್ರವರ್ಗಗಳಿಗೆ ಈ ಕೆಳಕಂಡಂತೆ ಮೀಸಲಾತಿಯನ್ನು ಅನುಸರಿಸಲಾಗುವುದು. ಆಗಿಂದಾಗ್ಗೆ ಹೊರಡಿಸಲಾಗುವ ಸರ್ಕಾರಿ ಆದೇಶಗಳ ಮೇರೆಗೆ ಮೀಸಲಾತಿಯಲ್ಲಿ ಬದಲಾವಣೆಯಾಗಬಹುದು.

| | | |
|---|---|---|
| 1 | ಸಾಮಾನ್ಯ ವರ್ಗ | ಶೇಕಡಾ 50 |
| 2 | ಪರಿಶಿಷ್ಟ ಜಾತಿ | ಶೇಕಡಾ 15 |
| 3 | ಪರಿಶಿಷ್ಟ ಪಂಗಡ | ಶೇಕಡಾ 03 |
| 4 | ಪ್ರವರ್ಗ–1 | ಶೇಕಡಾ 04 |
| 5 | ಪ್ರವರ್ಗ–2ಎ | ಶೇಕಡಾ 15 |
| 6 | ಪ್ರವರ್ಗ–2ಬಿ | ಶೇಕಡಾ 04 |
| 7 | ಪ್ರವರ್ಗ–3ಎ | ಶೇಕಡಾ 04 |
| 8 | ಪ್ರವರ್ಗ–3ಬಿ | ಶೇಕಡಾ 05 |

ಮೇಲ್ಕಂಡ ಮೀಸಲಾತಿ ಅನ್ವಯ ಅಭ್ಯರ್ಥಿಗಳು ದೊರೆಯದ ಪಕ್ಷದಲ್ಲಿ ಮೀಸಲಾತಿಯನ್ನು ಲಭ್ಯವಿರುವ ಮಿತಿಗೆ ಸೀಮಿತಗೊಳಿಸಿ ಸಾಮಾನ್ಯ ವರ್ಗದ ಅಭ್ಯರ್ಥಿಗಳನ್ನು ತುಂಬಲಾಗುವುದು.

ಪ್ರವರ್ಗದಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ದಾಖಲಾತಿ ಸಮಯದಲ್ಲಿ ಕಡ್ಡಾಯವಾಗಿ ಸಂಬಂಧಿಸಿದ ಪ್ರವರ್ಗದ ಜಾತಿ ಪ್ರಮಾಣ ಪತ್ರವನ್ನು ದಾಖಲಾತಿಯ ಸಮಯದಲ್ಲಿ ವ್ಯವಸ್ಥಾಪಕ ಕೇಂದ್ರದಲ್ಲಿ ಸಲ್ಲಿಸಬೇಕು. ತಪ್ಪಿದಲ್ಲಿ ದಾಖಲಾತಿ ನೀಡಲಾಗುವುದಿಲ್ಲ.

**ಸೂಚನೆ: ಕಲ್ಯಾಣ ಕರ್ನಾಟಕ ವಲಯದ 371(ಜೆ) ಅಧಿನಿಯಮದಡಿಯಲ್ಲಿ ನಿಗದಿಪಡಿಸಿರುವ ನಿಯಮಗಳನ್ನು ಅನುಸರಿಸಿ ಎಲ್ಲಾ ಮೀಸಲಾತಿಗಳಲ್ಲೂ ಮೀಸಲಾತಿಯನ್ನು ನೀಡಲಾಗುವುದು.**

## VI. ಒಳ ಮೀಸಲಾತಿಗಳು

| | | |
|---|---|---|
| ಕನ್ನಡ ಮಾಧ್ಯಮದ ಒಳ ಮೀಸಲಾತಿ | ಶೇ. 5 ರಷ್ಟು | 1 ರಿಂದ 10 ನೇ ತರಗತಿಯವರೆಗೂ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದವರಿಗೆ |
| ಮಹಿಳಾ ಮೀಸಲಾತಿ | ಶೇ.50 ರಷ್ಟು | ಸಾಕಷ್ಟು ಮಹಿಳಾ ಅಭ್ಯರ್ಥಿಗಳು ದೊರೆಯದಿದ್ದಲ್ಲಿ ಪುರುಷ ಅಭ್ಯರ್ಥಿಗಳಿಂದ ತುಂಬಲಾಗುವುದು. |
| ವಿಶೇಷ ಚೇತನ ಅಭ್ಯರ್ಥಿಗಳಿಗೆ | ಶೇ. 5 ರಷ್ಟು | ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 128 ಸೆ ನೆ ನಿ 2006, ಬೆಂಗಳೂರು ದಿನಾಂಕ: 1ನೇ ಆಗಸ್ಟ್ 2009<br>ಶೇ 40 ಕ್ಕಿಂತ ಕಡಿಮೆ ವಿಕಲಚೇತನ ಇರುವ ಅಭ್ಯರ್ಥಿಗಳು ವಿಕಲಚೇತನ ಮೀಸಲಾತಿಯಡಿಯಲ್ಲಿ ಸೀಟನ್ನು ಕ್ಲೇಮು ಮಾಡಲು ಅರ್ಹತೆ ಇರುವುದಿಲ್ಲ.<br>ಡಿ.ಪಿ.ಇಡಿ ಕೋರ್ಸಿಗೆ ಅಂಗವಿಕಲ ಮೀಸಲಾತಿ ಅನ್ವಯವಾಗುವುದಿಲ್ಲ. |

ವಿಶೇಷ ಚೇತನ ಅಭ್ಯರ್ಥಿಗಳು ದಾಖಲಾತಿ ಸಮಯದಲ್ಲಿ ಇತರ ಎಲ್ಲಾ ಮೂಲ ದಾಖಲೆಗಳೊಂದಿಗೆ ವೈದ್ಯಕೀಯ ಮಂಡಳಿಯಿಂದ ಪಡೆದಿರುವ ವೈದ್ಯಕೀಯ ಪ್ರಮಾಣ ಪತ್ರವನ್ನು (ಅನುಬಂಧದಲ್ಲಿ ನೀಡಿರುವ ನಮೂನೆಯಲ್ಲಿ) ಕಡ್ಡಾಯವಾಗಿ ದಾಖಲಾತಿಯ ಸಮಯದಲ್ಲಿ ವ್ಯವಸ್ಥಾಪಕ ಕೇಂದ್ರದಲ್ಲಿ ಸಲ್ಲಿಸಬೇಕು. ಈ ಪ್ರಮಾಣ ಪತ್ರದಲ್ಲಿ ಅಂಗವಿಕಲತೆಯ ಶೇಕಡಾ ಪ್ರಮಾಣವು ನಮೂದಿತವಾಗಿರಬೇಕು. ವೈದ್ಯಕೀಯ ಮಂಡಳಿಯಿಂದ ಪಡೆದಿರುವ ವೈದ್ಯಕೀಯ ಪ್ರಮಾಣ ಪತ್ರವನ್ನು ಸಲ್ಲಿಸಿರುವ ವಿಶೇಷ ಚೇತನ ಅಭ್ಯರ್ಥಿಗಳನ್ನು ಮಾತ್ರ ವಿಶೇಷ ಚೇತನ ಮೀಸಲಾತಿಯಲ್ಲಿ ಪರಿಗಣಿಸಲಾಗುವುದು. ವೈದ್ಯಕೀಯ ಮಂಡಳಿಯಿಂದ ಪಡೆದಿರುವ ವೈದ್ಯಕೀಯ ಪ್ರಮಾಣ ಪತ್ರವನ್ನು ಸಲ್ಲಿಸದಿರುವ ವಿಶೇಷ ಚೇತನ ಅಭ್ಯರ್ಥಿಗಳನ್ನು ಅಂಗವಿಕಲ ಮೀಸಲಾತಿಯಲ್ಲಿ ಪರಿಗಣಿಸಲಾಗುವುದಿಲ್ಲ.

ಶ್ರವಣ ದೋಷದ ಅಭ್ಯರ್ಥಿಗಳು ತಮ್ಮ ಸ್ವಂತ ಜವಾಬ್ದಾರಿಯೊಂದಿಗೆ ನಿಮ್ಹಾನ್ಸ್ ಆಸ್ಪತ್ರೆ **(NIMHANS HOSPITAL)** ಹೊಸೂರು ರಸ್ತೆ, ಬೆಂಗಳೂರು ಅಥವಾ ಸಂಜಯಗಾಂಧಿ ಅಪಘಾತ ಮತ್ತು ಸಂಶೋಧನಾ ಸಂಸ್ಥೆ ಆಸ್ಪತ್ರೆ, ಜಯನಗರ ಈಸ್ಟ್, ಭೈರಸಂದ್ರ, ಬೆಂಗಳೂರು ಇಲ್ಲಿ ಆಡಿಯೋಗ್ರಾಂ ಪರೀಕ್ಷೆಗೆ ಒಳಪಟ್ಟು, ಅವರು ನೀಡುವ ವರದಿಯನ್ನು ವೈದ್ಯಕೀಯ ಮಂಡಳಿಯ ಮುಂದೆ ಹಾಜರು ಪಡಿಸಿ, ವೈದ್ಯಕೀಯ ಮಂಡಳಿ ನೀಡುವ ವೈದ್ಯಕೀಯ ಪ್ರಮಾಣ ಪತ್ರವನ್ನು (ಅನುಬಂಧದಲ್ಲಿ ನೀಡಿರುವ ನಮೂನೆಯಲ್ಲಿ) ದಾಖಲಾತಿ ಸಮಯದಲ್ಲಿ ಇತರ ಮೂಲ ದಾಖಲೆಗಳೊಂದಿಗೆ ಸಲ್ಲಿಸಬೇಕು.

**ಶಿಕ್ಷಕರ ತರಬೇತಿ ಸಂಸ್ಥೆಯ ವಿವರಗಳನ್ನು ಇದರೊಂದಿಗೆ ಪ್ರಕಟಿಸಲಾಗಿದೆ. ಇದರಲ್ಲಿ ನೀಡಲಾಗಿರುವ ಮಾಹಿತಿಯು ಕಳೆದ ಸಾಲಿನ ಅಂದರೆ 2021–2022 ನೇ ಸಾಲಿಗೆ ಸಂಬಂಧಿಸಿರುತ್ತದೆ. ಆದಾಗ್ಯೂ 2022–23 ನೇ ಸಾಲಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆಗಳ ಬಗ್ಗೆ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಅಥವಾ ಸಂಬಂಧಿಸಿದ ತರಬೇತಿ ಸಂಸ್ಥೆಯನ್ನು ಸಂಪರ್ಕಿಸಿ ಖಚಿತಪಡಿಸಿಕೊಂಡು ಅರ್ಜಿಯಲ್ಲಿ ಆದ್ಯತೆಯನ್ನು ನಮೂದಿಸುವುದು.**

## VII. ಸರ್ಕಾರಿ ಕೋಟಾದ ಉಳಿಕೆ ಸೀಟುಗಳನ್ನು ಹಂಚಿಕೆ ಮಾಡುವ ಬಗ್ಗೆ

ಕನ್ನಡ ಮಾಧ್ಯಮವನ್ನು ಹೊರತುಪಡಿಸಿ ಉಳಿದ ಮಾಧ್ಯಮಗಳು ಅಂದರೆ ಆಂಗ್ಲ, ಉರ್ದು, ಮರಾಠಿ, ತೆಲುಗು ಮತ್ತು ತಮಿಳು ಮಾಧ್ಯಮಗಳಿಗೆ ಕರ್ನಾಟಕ ಅಭ್ಯರ್ಥಿಗಳನ್ನು ಹಂಚಿಕೆ ಮಾಡಿದ ನಂತರ ಉಳಿದ ಸೀಟುಗಳನ್ನು ಕರ್ನಾಟಕೇತರ ಅಭ್ಯರ್ಥಿಗಳಿಗೆ ಹಂಚಿಕೆ ಮಾಡಲಾಗುವುದು. ಇದಕ್ಕಾಗಿ ಈ ಅಭ್ಯರ್ಥಿಗಳು ಇತರ ಅಭ್ಯರ್ಥಿಗಳೊಡನೆ ಅರ್ಜಿಯನ್ನು ಸಲ್ಲಿಸಬಹುದು. ಕೆಳಗಿನ ಷರತ್ತುಗಳನ್ವಯ ಅವರ ಆಯ್ಕೆಯನ್ನು ಮಾಡಲಾಗುವುದು ಮತ್ತು ದಾಖಲಾತಿಯನ್ನು ನಿಗದಿತ ದಿನಾಂಕದಂದು ಕೇಂದ್ರೀಕೃತ ದಾಖಲಾತಿ ಘಟಕದಲ್ಲಿ ನೀಡಲಾಗುವುದು. ದಾಖಲಾತಿ ದಿನಾಂಕಗಳನ್ನು ಮುಂದೆ ಎಲ್ಲಾ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳಲ್ಲಿ ಪ್ರಕಟಿಸಲಾಗುವುದು.

1) ಈ ಅಭ್ಯರ್ಥಿಗಳು ಅರ್ಹತೆಗಳು 2,3,4 ಮತ್ತು 5 ರಲ್ಲಿ ಇರುವಂತೆ ಡಿ.ಇಎಲ್.ಇಡಿ/**ಡಿ.ಪಿ.ಎಸ್.ಇ** ಕೋರ್ಸಿಗೆ ಮತ್ತು ಅರ್ಹತೆಗಳು 2 ಮತ್ತು 3 ರಲ್ಲಿ ಇರುವಂತೆ ಡಿ.ಪಿ.ಇಡಿ ಕೋರ್ಸಿಗೆ ಅರ್ಹತೆಯನ್ನು ಪಡೆದಿರಬೇಕು.
2) ಕ್ರಮಸಂಖ್ಯೆ 4 ರಲ್ಲಿ ನೀಡಿರುವ ಶುಲ್ಕ ವಿನಾಯಿತಿಯು ಈ ಅಭ್ಯರ್ಥಿಗಳಿಗೆ ಅನ್ವಯಿಸುವುದಿಲ್ಲ.

**(1) ಆಯ್ಕೆಯ ವಿಧಾನ:–**

ಅಭ್ಯರ್ಥಿಗಳಿಂದ ಸ್ವೀಕೃತಿಯಾದ ಎಲ್ಲಾ ಆಫ್‌ಲೈನ್ ಅರ್ಜಿಗಳನ್ನು ಕೇಂದ್ರೀಕೃತ ದಾಖಲಾತಿ ಘಟಕ, ಕೆ.ಜಿ ರಸ್ತೆ ಬೆಂಗಳೂರು, ಈ ಕಛೇರಿಯಲ್ಲಿ ಪರಿಶೀಲಿಸಿ ಅಭ್ಯರ್ಥಿಗಳು ಅರ್ಜಿಗಳಲ್ಲಿ ನೀಡಿರುವ ಮಾಹಿತಿಯ ಆಧಾರದ ಮೇಲೆ ಮೆರಿಟ್ ಮತ್ತು ಮೀಸಲಾತಿ ಅನ್ವಯ ಆಯ್ಕೆಪಟ್ಟಿಗಳನ್ನು ಸಂಬಂಧಪಟ್ಟ ವ್ಯವಸ್ಥಾಪಕ ಕೇಂದ್ರಗಳಲ್ಲಿ (ಡಯೆಟ್) ಪ್ರಕಟಿಸಲಾಗುವುದು ಹಾಗೂ ಇಲಾಖಾ ವೆಬ್‌ಸೈಟ್ ವಿಳಾಸ www.schooleducation.kar.nic.in ರಲ್ಲಿ ಪ್ರಕಟಿಸಲಾಗುವುದು.

## VIII. ಆಕ್ಷೇಪಣೆ ಸಲ್ಲಿಸುವ ವಿಧಾನ

1. ಪಟ್ಟಿಗಳನ್ನು ಪ್ರಕಟಿಸಿದ ನಂತರ ಅಭ್ಯರ್ಥಿಗಳು ತಾವು ಒದಗಿಸಿರುವ ಮಾಹಿತಿಗಳ ಬಗ್ಗೆ ಏನಾದರೂ ವ್ಯತ್ಯಾಸ ಅಥವಾ ದೋಷಗಳಿದ್ದಲ್ಲಿ ಆಕ್ಷೇಪಣೆಯನ್ನು ಸಲ್ಲಿಸಬಹುದು.

| | ಪ್ರಕಟಿಸಿರುವ ಪಟ್ಟಿಯಲ್ಲಿ ತಮ್ಮ ಬಗೆಗಿನ ಈ ಕೆಳಗಿನ ಯಾವುದೇ ಮಾಹಿತಿಯಲ್ಲಿ ದೋಷವಿದ್ದಲ್ಲಿ |
|---|---|
| (i) | ಹೆಸರು, ಲಿಂಗ, ಹುಟ್ಟಿದ ದಿನಾಂಕ, ಪ್ರವರ್ಗ, ಕರ್ನಾಟಕ/ಕರ್ನಾಟಕೇತರ, ಅಂಗವಿಕಲತೆಯ ಬಗೆಗಿನ ಮಾಹಿತಿ, ವಿಶೇಷ ಗುಂಪಿನ ಬಗೆಗಿನ ಮಾಹಿತಿ– ಇವುಗಳ ಬಗ್ಗೆ ದೋಷವಿದ್ದಲ್ಲಿ |
| (ii) | ಅರ್ಹತಾ ಪರೀಕ್ಷೆಯ ಗರಿಷ್ಠ ಅಂಕಗಳು ಮತ್ತು ಗಳಿಸಿರುವ ಅಂಕಗಳು, ಭಾಷಾ ವಿಷಯಗಳು, ಐಚ್ಛಿಕ ವಿಷಯಗಳು, ಕಾಂಬಿನೇಷನ್ ಇವುಗಳಲ್ಲಿ ವ್ಯತ್ಯಾಸವಾದಾಗ. |
| (iii) | ಡಿ.ಇಎಲ್.ಇಡಿ. ಕೋರ್ಸಿನಲ್ಲಿ ಅಧ್ಯಯನ ಮಾಡಬಯಸುವ ಮಾಧ್ಯಮದ ಬಗ್ಗೆ ಹಾಗೂ ಇತರೆ ಆಯ್ಕೆಗೆ ಸಂಬಂಧಪಟ್ಟ ಮಾಹಿತಿಗಳಲ್ಲಿ ದೋಷವಿದ್ದಲ್ಲಿ ಆಕ್ಷೇಪಣೆಯನ್ನು ಸಲ್ಲಿಸಬಹುದಾಗಿದೆ. |

ಪಟ್ಟಿಯನ್ನು ಪ್ರಕಟಿಸಿದ 07 ಕಛೇರಿ ಕೆಲಸದ ದಿನಗಳೊಳಗಾಗಿ ಆಕ್ಷೇಪಣೆಯನ್ನು ಸಾಬೀತುಪಡಿಸುವ ಎಲ್ಲಾ ಮೂಲದಾಖಲೆಗಳ ಹಾಗೂ ಇತರೆ ಮೂಲದಾಖಲೆಗಳ ಒಂದು ಸೆಟ್ ಸ್ವಧೃಢೀಕೃತ ಜೆರಾಕ್ಸ್ ಪ್ರತಿಗಳನ್ನು ಅನುಬಂಧದಲ್ಲಿರುವ ನಿಗದಿತ ನಮೂನೆಯೊಂದಿಗೆ ಸಂಬಂಧಪಟ್ಟ ಜಿಲ್ಲಾ ವ್ಯವಸ್ಥಾಪಕ ಕೇಂದ್ರದಲ್ಲಿ (ಡಯಟ್) ಸಲ್ಲಿಸಬೇಕು. ಆಕ್ಷೇಪಣೆಯೊಂದಿಗೆ ಸಲ್ಲಿಸುವ ಜೆರಾಕ್ಸ್ ಪ್ರತಿಗಳನ್ನು ಹಿಂದಿರುಗಿಸಲಾಗುವುದಿಲ್ಲ. ಆಕ್ಷೇಪಣೆ ಸಲ್ಲಿಸಿರುವ ಮತ್ತು ಸಲ್ಲಿಸದಿರುವ ಅಭ್ಯರ್ಥಿಗಳನ್ನು ಸಹ ಅವರ ಮೀಸಲಾತಿ / ಮೆರಿಟ್ ಅನ್ವಯ ಮುಂದುವರೆದ ಪಟ್ಟಿಗಳಲ್ಲಿ ಆಯ್ಕೆ ಮಾಡಲು ಪರಿಗಣಿಸಲಾಗುವುದು.

**(2) ಸಲ್ಲಿಸಬೇಕಾದ ಮೂಲ ದಾಖಲೆಗಳು:–**

ಆಫ್‌ಲೈನ್ ಮೂಲಕ ಸಲ್ಲಿಸಿರುವ ಅರ್ಜಿಯಲ್ಲಿ ಅಭ್ಯರ್ಥಿ ನೀಡಿರುವ ಮಾಹಿತಿಗಳನ್ನು ಆಧರಿಸಿ ಆಯ್ಕೆಯನ್ನು ಮೆರಿಟ್ ಮತ್ತು ಮೀಸಲಾತಿ ಅನ್ವಯ ಮಾಡಲಾಗುವುದು. ಅಭ್ಯರ್ಥಿ ನೀಡಿರುವ ಮಾಹಿತಿಯು ತಪ್ಪಾಗಿದ್ದು ಅಥವಾ ದೋಷಪೂರಿತವಾಗಿದ್ದು ಅಥವಾ ಇಲಾಖೆಯು ತಪ್ಪಾಗಿ ಗ್ರಹಿಸಿ ಸೀಟು ನೀಡಿದ್ದಲ್ಲಿ ದಾಖಲಾತಿಯನ್ನು ಅನೂರ್ಜಿತಗೊಳಿಸಿ ಸೀಟನ್ನು ರದ್ದುಪಡಿಸಲಾಗುವುದು. ದಾಖಲಾತಿ ಬಯಸುವ ಎಲ್ಲಾ ಅಭ್ಯರ್ಥಿಗಳು ಈ ಕೆಳಕಂಡ, ಸಂಬಂಧಪಟ್ಟ ಮೂಲ ದಾಖಲೆಗಳನ್ನು ಪರಿಶೀಲನೆಗಾಗಿ ಕಡ್ಡಾಯವಾಗಿ ದಾಖಲಾತಿಯ ಸಮಯದಲ್ಲಿ "ವ್ಯವಸ್ಥಾಪಕ ಕೇಂದ್ರ" (DIET) ಗಳಲ್ಲಿ ಹಾಜರು ಪಡಿಸುವುದು. ದಾಖಲಾತಿ ಸಮಯದಲ್ಲಿ ಹಾಜರುಪಡಿಸಬೇಕಾದ ಮೂಲ ದಾಖಲೆಗಳು:

i) ಕ್ರೋಢೀಕೃತ ಎಸ್.ಎಸ್.ಎಲ್.ಸಿ. ಅಂಕಪಟ್ಟಿ (ಪರೀಕ್ಷಾ ಮಂಡಳಿಯವರು ಅಂಕ ಪಟ್ಟಿಯಲ್ಲಿ ಮಾಧ್ಯಮ ಮತ್ತು ಪ್ರಥಮ ಭಾಷೆಯನ್ನು ನಮೂದಿಸಿರಬೇಕು) ಖಾಸಗಿ ಅಭ್ಯರ್ಥಿಯಾಗಿದ್ದಲ್ಲಿ 'ಖಾಸಗಿ ಅಭ್ಯರ್ಥಿ' ಎಂದು ಅಂಕಪಟ್ಟಿಯಲ್ಲಿ ಪರೀಕ್ಷಾ ಮಂಡಳಿಯವರಿಂದ ನಮೂದಿತವಾಗಿರಬೇಕು.

ii) ದ್ವಿತೀಯ ಪಿ.ಯು.ಸಿ.ಅಂಕಪಟ್ಟಿ

iii) ಕರ್ನಾಟಕ ಅಭ್ಯರ್ಥಿ ಎಂದು ಪರಿಗಣಿಸಲು ಕನಿಷ್ಟ 7 ವರ್ಷಗಳ ವ್ಯಾಸಂಗ ಪ್ರಮಾಣ ಪತ್ರಗಳು. ಇದನ್ನು ದಾಖಲಾತಿ ಬಯಸುವ ಎಲ್ಲಾ ಅಭ್ಯರ್ಥಿಗಳು ಕಡ್ಡಾಯವಾಗಿ ಸಲ್ಲಿಸಬೇಕು. (1 ರಿಂದ 12ನೇ ತರಗತಿವರೆಗೆ **ಅನುಬಂಧ–01** ರಂತೆ)

**iv)** ಕನ್ನಡ ಮಾಧ್ಯಮದ ಮೀಸಲಾತಿಗೆ ಪರಿಗಣಿಸಲು 1 ರಿಂದ 10ನೇ ತರಗತಿವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಬಗ್ಗೆ ಪ್ರಮಾಣ ಪತ್ರಗಳು **(ಅನುಬಂಧ–01 ರಂತೆ)**

v) ಪ್ರವರ್ಗದಲ್ಲಿ ಆಯ್ಕೆ ಬಯಸಿದಲ್ಲಿ ಪರಿಶಿಷ್ಟ ಜಾತಿ / ಪಂಗಡದ ಅಭ್ಯರ್ಥಿಗಳು ನಮೂನೆ 'ಡಿ' ಯಲ್ಲಿ, ಪ್ರವರ್ಗ–1 ಅಭ್ಯರ್ಥಿಗಳು ನಮೂನೆ 'ಇ'ಯಲ್ಲಿ ಹಾಗೂ 2ಎ, 2ಬಿ, 3ಎ ಮತ್ತು 3ಬಿ ವರ್ಗಗಳ ಅಭ್ಯಥಿಗಳು ನಮೂನೆ 'ಎಫ್'ನಲ್ಲಿ ಸಂಬಂಧಿಸಿದ ತಾಲ್ಲೂಕು ತಹಶೀಲ್ದಾರರಿಂದ ದೃಢೀಕರಿಸಿ ಪಡೆದ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳು

vi) ಸಂಬಂಧಪಟ್ಟ ತಹಶೀಲ್ದಾರ್‌ರವರಿಂದ ಪಡೆದ ವಾಸಸ್ಥಳ ಪ್ರಮಾಣ ಪತ್ರ

(ಎ) ಮುಕ್ತ ಶಾಲೆಯಲ್ಲಿ ಅಥವಾ ನೇರವಾಗಿ ನೋಂದಣಿ ಮಾಡಿ ಎಸ್.ಎಸ್.ಎಲ್.ಸಿ ಅಥವಾ ಪಿ.ಯು.ಸಿ.ಯನ್ನು ಪಾಸು ಮಾಡಿರುವ ಕರ್ನಾಟಕ ಅಭ್ಯರ್ಥಿಗಳು – 7 ವರ್ಷಗಳದ್ದು.

(ಬಿ) ಹೊರನಾಡು ಕನ್ನಡಿಗರು – 5 ವರ್ಷಗಳದ್ದು.

(ಸಿ) ಗಡಿನಾಡು ಕನ್ನಡಿಗರು – ವಾಸಸ್ಥಳದ ಪ್ರಮಾಣ ಪತ್ರ

vii) ವಿಶೇಷ ಗುಂಪುಗಳಲ್ಲಿ ಆಯ್ಕೆ ಬಯಸಿದಲ್ಲಿ ಸಂಬಂಧಿಸಿದ ಪ್ರಮಾಣ ಪತ್ರಗಳನ್ನು ನಿಗದಿತ ನಮೂನೆಗಳಲ್ಲಿ.

viii) ಅಂಗವಿಕಲ ಅಭ್ಯರ್ಥಿಗಳು – ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪಡೆದ ಪ್ರಮಾಣ ಪತ್ರ, ಅನುಬಂಧದಲ್ಲಿ ನೀಡಿರುವ ನಮೂನೆಯಂತೆ (ಡಿ.ಇಎಲ್.ಇಡಿ/ಡಿ.ಪಿ.ಎಸ್.ಇ ಅಭ್ಯರ್ಥಿಗಳಿಗೆ ಮಾತ್ರ)

ix) ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪಡೆದ ವೈದ್ಯಕೀಯ ಸುಸ್ಥಿತಿ ಪ್ರಮಾಣ ಪತ್ರ. (ಡಿ.ಪಿ.ಇಡಿ ಅಭ್ಯರ್ಥಿಗಳು ಮಾತ್ರ)

x) ಇತರೆ ಮೂಲ ದಾಖಲೆಗಳು.

ಸೂಚನೆ: ಅಭ್ಯರ್ಥಿಗಳು ದಾಖಲಾತಿ ಸಮಯದಲ್ಲಿ ಮೂಲದಾಖಲೆಗಳನ್ನು ಮೇಲಿನ ಕ್ರಮದಲ್ಲಿಯೇ ಜೋಡಿಸಿ **ಅನುಬಂಧ** –7 ರೊಡನೆ ಸಲ್ಲಿಸಬೇಕು.

ಅಭ್ಯರ್ಥಿಗಳು ಮೂಲ ದಾಖಲೆಗಳೊಂದಿಗೆ ಅವುಗಳ ಒಂದು ಸೆಟ್ ಜೆರಾಕ್ಸ್ ಪ್ರತಿಗಳನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಮೂಲ ದಾಖಲೆಗಳೊಂದಿಗೆ ಸಲ್ಲಿಸುವ ಎಲ್ಲಾ ಜೆರಾಕ್ಸ್ ಪ್ರತಿಗಳ ಬಲಭಾಗದ ಮೇಲ್ತುದಿಯಲ್ಲಿ ಜಿಲ್ಲಾ ವ್ಯವಸ್ಥಾಪಕ ಕೇಂದ್ರದ ಸಂಖ್ಯೆ ಮತ್ತು ನೋಂದಣಿ ಸಂಖ್ಯೆಯನ್ನು ಕಡ್ಡಾಯವಾಗಿ ಕೆಂಪು ಶಾಯಿಯಲ್ಲಿ ನಮೂದಿಸುವುದು.

### (3) ಸಂಸ್ಥೆ ಹಂಚಿಕೆ ಸಹಿತ ಅಂತಿಮ ಆಯ್ಕೆಪಟ್ಟಿ, ಮಾಧ್ಯಮವಾರು ರ್‍ಯಾಂಕ್ ಪಟ್ಟಿ ಹಾಗೂ ತಿರಸ್ಕೃತ ಪಟ್ಟಿಗಳ ಪ್ರಕಟಣೆ

ಸಂಸ್ಥೆ ಹಂಚಿಕೆ ಸಹಿತ ಅಂತಿಮ ಆಯ್ಕೆ ಪಟ್ಟಿಯನ್ನು, ಮಾಧ್ಯಮವಾರು ರ್‍ಯಾಂಕ್ ಪಟ್ಟಿಗಳನ್ನು ಹಾಗೂ ತಿರಸ್ಕೃತ ಪಟ್ಟಿಗಳನ್ನು ನಿಗದಿತ ದಿನಾಂಕದಂದು ಎಲ್ಲಾ ವ್ಯವಸ್ಥಾಪಕ ಕೇಂದ್ರಗಳಲ್ಲಿ ಪ್ರಕಟಿಸಲಾಗುವುದು. ಅಂತಿಮ ಆಯ್ಕೆ ಪಟ್ಟಿಯಲ್ಲಿ ಹಂಚಿಕೆಯಾದ ಸಂಸ್ಥೆಯಲ್ಲಿ ದಾಖಲಾಗಲು ಇಚ್ಛಿಸುವ ಅಭ್ಯರ್ಥಿಗಳು ತಮ್ಮ ಎಲ್ಲಾ ಮೂಲ ದಾಖಲೆಗಳು ಹಾಗೂ ಅವುಗಳ ಒಂದು ಸೆಟ್ ಜೆರಾಕ್ಸ್ ಪ್ರತಿಗಳನ್ನು (**ಅನುಬಂಧ–7** ರಲ್ಲಿನ ನಿಗದಿತ ನಮೂನೆಯೊಂದಿಗೆ) ಜಿಲ್ಲಾ ವ್ಯವಸ್ಥಾಪಕ ಕೇಂದ್ರ (DIET) ದಲ್ಲಿ ನಿಗದಿತ ದಿನಾಂಕದೊಳಗೆ ಹಾಜರುಪಡಿಸಿ, ನಿಗಧಿತ ದಾಖಲಾತಿ ಶುಲ್ಕಕ್ಕೆ **ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ** (SBI) ಬ್ಯಾಂಕಿನ ಯಾವುದೇ ಶಾಖೆಯಲ್ಲಿ **'SPECIAL OFFICER' CAC, BANGALORE.** ಇವರ ಹೆಸರಿಗೆ ಬ್ಯಾಂಕ್ ಹುಂಡಿ ಪಡೆದು ಹುಂಡಿಯನ್ನು ಡಯೆಟ್‌ನಲ್ಲಿ ನೀಡಿ ದಾಖಲಾತಿಯನ್ನು ಪಡೆದುಕೊಳ್ಳುವುದು.

ಸಂಸ್ಥೆ ಹಂಚಿಕೆ ಸಹಿತ ಆಯ್ಕೆಪಟ್ಟಿಯಲ್ಲಿ ವಿಶೇಷ ಚೇತನ ಅಭ್ಯರ್ಥಿಗಳಿಗೆ ಮತ್ತು ವಿಶೇಷ ಗುಂಪಿನ ಅಭ್ಯರ್ಥಿಗಳಿಗೆ ಮೆರಿಟ್ ಮತ್ತು ಆದ್ಯತೆಯ ಅನ್ವಯ ಲಭ್ಯವಿರುವ ಸೀಟುಗಳನ್ನು ಹಂಚಿಕೆ ಮಾಡಲಾಗುವುದು.

